# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 25-11-2020 ರಂದು ಪೂರ್ವಾಹ್ನ 11-30 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶೈಕ್ಷಣಿಕ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯ ನಡಾವಳಿ.

ಹಾಜರಿದ್ದ ಸದಸ್ಯರು:

| | | |
|---|---|---|
| 1 | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3 | ಪ್ರೊ. ಡಿ.ಆನಂದ್ | ಸದಸ್ಯರು |
| 4 | ಡಾ. ಸೈಯದ್ ಕಾರುಳ ಮೊಹಿದ್ದೀನ್, | ಸದಸ್ಯರು |
| 5 | ಶ್ರೀ. ಗಪ್ಪಣ್ಣ | ಸದಸ್ಯರು |
| 6 | ಡಾ. ಚೈತ್ರ ನಾರಾಯಣ | ಸದಸ್ಯರು |
| 7 | ಶ್ರೀ ಕುಮಾರ | ಸದಸ್ಯರು |
| 8 | ಶ್ರೀಮತಿ. ಕೆ.ನಾಗರತ್ನಮ್ಮ | ಸದಸ್ಯರು |
| 9 | ಶ್ರೀ ದಿನೇಶ್ ಎಂ.ಗಾವಂಕರ್ | ಸದಸ್ಯರು |
| 10 | ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 11 | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12 | ಶ್ರೀಮತಿ ಪವಿತ್ರ.ವೈ.ಕೆ | ಸದಸ್ಯರು |
| 13 | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 14 | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 14 | ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16 | ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 17 | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

ಹಾಜರಾಗದ ಸದಸ್ಯರು:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಶ್ರೀ.ಟಿ.ರಾಮಕೃಷ್ಣ, ಸಿಂಡಿಕೇಟ್ ಸದಸ್ಯರು

ಮೊದಲಿಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| | |
|---|---|
| | ದಿನಾಂಕ 01-10-2020 ರಂದು ಜರುಗಿದ ಸಿಂಡಿಕೇಟಿನ 6ನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದೃಢೀಕರಿಸಲಾಯಿತು. |
| | ದಿನಾಂಕ 07-10-2020 ರಂದು ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ವಿಷಯ ಸಂಖ್ಯೆ: 10.5ರ ವಿಷಯಕ್ಕೆ ಸಂಬಂಧಿಸಿದಂತೆ, ಅತಿಥಿ ಉಪನ್ಯಾಸಕರುಗಳ ವಿಷಯ ಕುರಿತು ಡಾ. ಚೈತ್ರ ನಾರಾಯಣ್ ರವರು ಚರ್ಚಿಸಿದರು ಎಂಬುದರೊಂದಿಗೆ ದಿನಾಂಕ: 07-10-2020ರ ಸಿಂಡಿಕೇಟಿನ ವಿಷಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ತಿದ್ದುಪಡಿಯೊಂದಿಗೆ ದಿನಾಂಕ: 07-10-2020ರ ಸಿಂಡಿಕೇಟಿನ ವಿಷಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| | ದಿನಾಂಕ 19-10-2020 ರಂದು 100ನೇ ವಾರ್ಷಿಕ ಘಟಿಕೋತ್ಸವ ಪೂರ್ವಾಭಾವಿಯಾಗಿ ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 19-10-2020ರಂದು 100ನೇ ವಾರ್ಷಿಕ ಘಟಿಕೋತ್ಸವ ನಡೆದ ಸಂದರ್ಭದಲ್ಲಿ ನಡೆದ ಅಹಿತಕರ ಘಟನೆಗಳ ಬಗ್ಗೆ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಈ ಕೆಳಕಂಡಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.<br><br>1. ಮಾನ್ಯ ಸದಸ್ಯರಾದ, ಶ್ರೀ.ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ ರವರು ಮಾತನಾಡಿ, ಮಾನ್ಯ ಕುಲಪತಿಯವರ ಸಿಬ್ಬಂದಿವರ್ಗದವರು ನಮ್ಮನ್ನು ಅಗೌರವದಿಂದ ಕಾಣುವ ಬಗ್ಗೆ ಬೇಸರ ವ್ಯಕ್ತಪಡಿಸಿ, ಹಳೆಯ ಸಿಂಡಿಕೇಟ್ ಸದಸ್ಯರನ್ನು ಗೌರವದಿಂದ ಕಾಣುವ ವೈಖರಿಯನ್ನು ಸಭೆಗೆ ತಿಳಿಸಿದರು.<br><br>2. ಕುಲಪತಿಗಳ ಕಛೇರಿಯಲ್ಲಿ ಆ ದಿವಸ ಹಳೆಯ ಸಿಂಡಿಕೇಟ್ ಸದಸ್ಯರಿಗೆ ನೀಡಿದ ಗೌರವ ಹಾಲಿ ಸಿಂಡಿಕೇಟ್ ಸದಸ್ಯರಿಗೆ ನೀಡಲಿಲ್ಲ. ಹೊರಗೆ ನಿಲ್ಲಿ ಎಂದು ತಡೆದು ನಿಲ್ಲಿಸಿದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಜೊತೆಗೆ ಗೌ.ಡಾ. ನಿರ್ಣಯದ ಪ್ರಕ್ರಿಯೆ ಬಗ್ಗೆ ಹೇಗೆ ಎಂದು ಚರ್ಚಿಸಿ ಮಾಹಿತಿ ಪಡೆದರು.<br><br>3. ಮಾನ್ಯ ಸದಸ್ಯರಾದ, ಶ್ರೀ ಗಪ್ಪಣ್ಣ, ಇವರು ಮಾತನಾಡಿ, ಅಧ್ಯಕ್ಷರು ತಮ್ಮ ಸಿಬ್ಬಂದಿವರ್ಗದವರಿಗೆ ಸಿಂಡಿಕೇಟ್ ಸದಸ್ಯರನ್ನು ಗೌರವದಿಂದ ನೋಡಿಕೊಳ್ಳುವ ಬಗ್ಗೆ ತಿಳುವಳಿಕೆ ನೀಡಬೇಕೆಂದು ಹಾಗೂ ಭದ್ರತಾ ಸಿಬ್ಬಂದಿಯವರು ಸಿಂಡಿಕೇಟ್ ಸದಸ್ಯರುಗಳ ವಾಹನ ನಿಲುಗಡೆಗೆ ಅವಕಾಶ ನೀಡದೆ, ಅನುಚಿತವಾಗಿ ವರ್ತಿಸಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.<br><br>4. ಮಾನ್ಯ ಸದಸ್ಯರಾದ ಶ್ರೀ ದಿನೇಶ್ ಎಂ.ಗಾವಂಕರ್‌ರವರು ಮಾತನಾಡಿ, ಮಾನ್ಯ ಕುಲಪತಿಯವರ ಕಛೇರಿ ಸಿಬ್ಬಂದಿಯವರು ಘಟಿಕೋತ್ಸವದ ವಸ್ತ್ರವನ್ನು ಧರಿಸಿದ್ದರೂ ಸಹ ನಮ್ಮನ್ನು ಕಛೇರಿಯಿಂದ ಹೊರಗೆ ಕಳುಹಿಸಿರುವ ಪ್ರಸಂಗ ತುಂಬಾ ಬೇಸರ ಹಾಗೂ ನೋವನ್ನು ತಂದಿರುವ ಬಗ್ಗೆ ಸಭೆಗೆ ತಿಳಿಸಿದರು.<br><br>5. ಮಾನ್ಯ ಸದಸ್ಯರಾದ ಪ್ರೊ. ಎಸ್.ಡಿ. ದೊಡ್ಡಚಾರಿಯವರು ಮಾತನಾಡಿ, 100ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯರುಗಳನ್ನು ವೇದಿಕೆ ಮೇಲೆ ಕುಳಿತುಕೊಳ್ಳುವ ವ್ಯವಸ್ಥೆ ಮಾಡದಿರುವ ಬಗ್ಗೆ ಹಾಗೂ ನಾವು ವಿಶ್ವವಿದ್ಯಾನಿಲಯದಲ್ಲಿ ಇರುವುದರಿಂದ, ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳಿಗೆ ಸ್ವಯಂಸೇವಕರಾಗಿ ಕೆಲಸ ಮಾಡಲು ಉತ್ಸುಕರಾಗಿರುವುದರ ಬಗೆಗಿನ ಅಭಿಪ್ರಾಯವನ್ನು ಸಭೆಗೆ ತಿಳಿಸಿದರು. |

| | |
|---|---|
| | 6. ಮಾನ್ಯ ಸದಸ್ಯರಾದ ಡಾ. ಈ.ಸಿ. ನಿಂಗರಾಜ್‌ಗೌಡರವರು ಮಾತನಾಡಿ, ರ್‍ಯಾಂಕ್ ವಿಜೇತ ಅಭ್ಯರ್ಥಿಗಳಿಗೆ ಪಾರಿತೋಷಕಗಳನ್ನು ನೀಡುವ ಸಂದರ್ಭದಲ್ಲಿ ಅಧ್ಯಾಪಕ/ಅಧ್ಯಾಪಕೇತರ ಸಿಬ್ಬಂದಿವರ್ಗದವರು ಕ್ರಮಬದ್ಧವಾಗಿ/ವ್ಯವಸ್ಥಿತವಾಗಿ ವಿದ್ಯಾರ್ಥಿಗಳನ್ನು ವೇದಿಕೆ ಮೇಲೆ ಕಳುಹಿಸುವ ಮೂಲಕ ಘಟಿಕೋತ್ಸವದ ಘನತೆ ಕಾಪಾಡಬೇಕೆಂದರು.<br>7. ಮಾನ್ಯ ಸದಸ್ಯರಾದ ಡಾ. ಎಂ.ಎಸ್. ದಾಮೋದರರವರು ಮಾತನಾಡಿ, ತಮ್ಮನ್ನು ವೈಯಕ್ತಿಕವಾಗಿ ಗೌರವದಿಂದ ನಡೆಸಿಕೊಳ್ಳದಿರುವ ಬಗ್ಗೆ ಅಸಮಾಧಾನವನ್ನು ಸಭೆಗೆ ವ್ಯಕ್ತಪಡಿಸಿದರು. |
| | ದಿನಾಂಕ 19-10-2020 ರಂದು 100ನೇ ವಾರ್ಷಿಕ ಘಟಿಕೋತ್ಸವ ಸಂದರ್ಭದಲ್ಲಿ ನಡೆದ ಅಹಿತಕರ ಘಟನೆಗಳ ಬಗ್ಗೆ ಮಾನ್ಯ ಕುಲಪತಿಯವರು ವಿಷಾದವನ್ನು ವ್ಯಕ್ತಪಡಿಸಿ, ಇನ್ನು ಮುಂದೆ ಈ ರೀತಿ ನಡೆಯದಂತೆ ಕ್ರಮ ಕೈಗೊಳ್ಳಲಾಗುವುದೆಂದು ಮತ್ತು ಮುಂದಿನ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ಹಿಂದಿನ ದಿನವೇ ಸಿಂಡಿಕೇಟ್ ಸದಸ್ಯರುಗಳಿಗೆ ಘಟಿಕೋತ್ಸವ ಕಾರ್ಯಕ್ರಮದ ಪೂರ್ವಾಭ್ಯಾಸ (Rehearsal) ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | ದಿನಾಂಕ 19-10-2020 ರಂದು 100ನೇ ವಾರ್ಷಿಕ ಘಟಿಕೋತ್ಸವ ಪೂರ್ವಾಭಾವಿಯಾಗಿ ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| **2020/11.1** | ಡಾ. ಎ.ಸಿ. ಶಾರದ, ಸಹ ಪ್ರಾಧ್ಯಾಪಕರು, ಜೀವ ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ದೇಶದ ಕ್ಯಾಲಿಫೋರ್ನಿಯಕ್ಕೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | 1. ಡಾ. ಎ.ಸಿ. ಶಾರದ, ಸಹ ಪ್ರಾಧ್ಯಾಪಕರು, ಜೀವ ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಸ್ವಂತ ಕೆಲಸದ ನಿಮಿತ್ತ ಅವರ ಬೇಸಿಗೆ ರಜೆ ಹಾಗೂ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ದಿನಾಂಕ 20-01-2020 ರಿಂದ 30-06-2020ರ ವರೆಗೆ ಹೋಗಿ ಬರಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.<br>2. ಸದರಿಯವರು ಕೋವಿಡ್-19ರ ಸಮಸ್ಯೆಯಿಂದಾಗಿ ಎರಡು ತಿಂಗಳು ತಡವಾಗಿ ದಿನಾಂಕ 01-09-2020ರಂದು ಕಛೇರಿ ಕೆಲಸಕ್ಕೆ ವರದಿ ಮಾಡಿಕೊಂಡಿದ್ದು, ಇವರು ಪಡೆದಿದ್ದ ಗಳಿಕೆ ರಜೆಯ ಅವಧಿಯನ್ನು 02 ತಿಂಗಳು ವಿಸ್ತರಿಸುವಂತೆ ಕೋರಿರುವ ಮನವಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **2020/11.2** | ದಿನಾಂಕ 28-07-2020ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2020-21ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ಮೊದಲನೇ ಸಭೆಯ ನಡವಳಿಯನ್ನು (ಅಡಕ-"ಅ") ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ. |
| | 1. ದಿನಾಂಕ 28-07-2020ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2020-21ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ಮೊದಲನೇ ಸಭೆಯ ನಡವಳಿಯಲ್ಲಿ ಕ್ರಮ ಸಂಖ್ಯೆ:08ರ ಕಾರ್ಯಸೂಚಿಗೆ ಸಂಬಂಧಿಸಿದಂತೆ, ಪುರುಷರ ಸ್ನಾತಕೋತ್ತರ ವಿದ್ಯಾರ್ಥಿನಿಲಯ ಬ್ಲಾಕ್-2ರಲ್ಲಿ ನಿಲಯವಾಸಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಸಂಬಂಧಪಟ್ಟ ಶಿಕ್ಷಕ ಸಲಹೆಗಾರರು ಭೋಜನ ಶುಲ್ಕ ರೂ. 19,00,918/-ಗಳನ್ನು ವಸೂಲು ಮಾಡದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ ಮಾನ್ಯ ಸದಸ್ಯರಾದ ಪ್ರೊ. ಎಸ್.ಡಿ. ದೊಡ್ಡಚಾರಿಯವರು ಸಭೆಯ ಗಮನಕ್ಕೆ ತಂದರು. |

| | |
|---|---|
| | 2. ಮಾನ್ಯ ಸದಸ್ಯರಾದ ಡಾ. ಈ.ಸಿ. ನಿಂಗರಾಜ್‌ಗೌಡರವರು ಮಾತನಾಡಿ, ದಿನಾಂಕ 15-02-2020ರ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಣೆ ಬಗ್ಗೆ ಸಿಂಡಿಕೇಟ್ ಉಪಸಮಿತಿ ರಚಿಸಿ, ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ಧಾರ ತೆಗೆದುಕೊಂಡಿದ್ದರೂ ಸಹ ಇದುವರೆಗೂ ಯಾವುದು ಕಾರ್ಯಗತವಾಗಿಲ್ಲದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಇದೇ ಸಿಂಡಿಕೇಟ್ ಸಭೆಯಲ್ಲಿ ನಾನು ಕೇಳಿದ ಪ್ರಶ್ನೆಗೆ ಮಾನ್ಯ ಕುಲಪತಿಯವರು ಉತ್ತರಿಸುತ್ತಾ, ಸಂಪರ್ಕಾಧಿಕಾರಿಗಳ ಹುದ್ದೆಯು ಸರ್ಕಾರದಿಂದ ಮಂಜೂರಾದ ಹುದ್ದೆಯಾಗಿರುವುದಿಲ್ಲ ಎಂದ ಬಳಿಕವೂ, ದಿನಾಂಕ: 28-07-2020ರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಸಭೆಗೆ ಅವರನ್ನು ಸದಸ್ಯರನ್ನಾಗಿ ಆಹ್ವಾನಿಸಿದ್ದು ಸರಿಯೇ? ಆದುದರಿಂದ ಸಂಪರ್ಕಾಧಿಕಾರಿ, ವಿದ್ಯಾರ್ಥಿನಿಲಯ ಹಾಗೂ ಎಂಜಿನಿಯರಿಂಗ್ ವಿಭಾಗ, ಈ ಹುದ್ದೆಯನ್ನು ರದ್ದು ಮಾಡುವಂತೆ ಸಭೆಯನ್ನು ಕೋರಿದರು.<br><br>ಮುಂದುವರೆದು, ಮಾನ್ಯ ಸದಸ್ಯರಾದ ಪ್ರೊ. ಎಸ್.ಡಿ.ದೊಡ್ಡಚಾರಿಯವರ ಅಭಿಪ್ರಾಯವನ್ನು ಅನುಮೋದಿಸುತ್ತಾ, ನಿಲಯವಾಸಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಸಂಬಂಧಪಟ್ಟ ಶಿಕ್ಷಕ ಸಲಹೆಗಾರರು ಭೋಜನಾ ಶುಲ್ಕ ರೂ.19,00,918/-ಗಳನ್ನು ವಸೂಲು ಮಾಡದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಸಂಬಂಧಪಟ್ಟ ಅಧ್ಯಾಪಕ/ಅಧ್ಯಾಪಕೇತರ ನೌಕರರಿಂದ ವಸೂಲು ಮಾಡಬೇಕೆಂದು, ದಿನಾಂಕ: 4-01-2020 ರಂದು ವಿದ್ಯಾರ್ಥಿ ನಿಲಯಗಳ ಖರ್ಚು ವೆಚ್ಚದ ಬಗ್ಗೆ ವಿವರ ಕೇಳಿದ್ದೆ. ಅದರಂತೆ ವರ್ಷಕ್ಕೆ ರೂ.3,13,45,998. ಅಂದರೆ ಎರಡು ವರ್ಷಕ್ಕೆ ರೂ. 6,26,91,996 ಹೆಚ್ಚಳವಾಗಿದೆ. ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಸಭೆಯನ್ನು ಆಗ್ರಹಿಸಿದರು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಅಡುಗೆಯವರು ಮತ್ತು ಸಹಾಯಕರು ನಿಗದಿತ ಸಂಖ್ಯೆಗಿಂತ ಹೆಚ್ಚಾಗಿದ್ದು, ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿದ್ದು, ಹೆಚ್ಚುವರಿ ಅಡುಗೆಯವರ ಸೇವೆಯ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತವಾಗಿ ವಾಸವಾಗಿರುವವರನ್ನು ತೆರವುಗೊಳಿಸಬೇಕೆಂದು, ವಿಶ್ವವಿದ್ಯಾನಿಲಯದಲ್ಲಿ Centralized /Common kitchen ವ್ಯವಸ್ಥೆ ಜಾರಿಗೆ ತಂದು ಒಂದೇ ಕಡೆ ಆಹಾರವನ್ನು ತಯಾರಿಸಿ, ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡುವ ವ್ಯವಸ್ಥೆ ಅಥವಾ ಟೆಂಡರ್ ವ್ಯವಸ್ಥೆಯನ್ನು ಮುಂದುವರಿಸಬೇಕೋ ಅಥವಾ ಪ್ರಸಕ್ತ ವ್ಯವಸ್ಥೆಯನ್ನು ಮುಂದುವರಿಸಬೇಕೋ ಎಂಬುದರ ಬಗ್ಗೆ ವರದಿ ನೀಡಲು "ಸಿಂಡಿಕೇಟ್ ಉಪಸಮಿತಿಯನ್ನು" ರಚಿಸಲು ತೀರ್ಮಾನಿಸಲಾಗಿತ್ತು. ಆದ್ದರಿಂದ ಈ ವಿಷಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್‌ಗೌಡರವರು ಸಭೆಯಲ್ಲಿ ತಿಳಿಸಿದರು.<br><br>3. ಮಾನ್ಯ ಸದಸ್ಯರಾದ ಡಾ.ದಾಮೋದರ್ ರವರು ಮಾತನಾಡಿ, ವಿದ್ಯಾರ್ಥಿನಿಲಯಗಳಲ್ಲಿ ಊಟದ ವ್ಯವಸ್ಥೆಗೆ ಟೆಂಡರ್ ಕರೆಯುವುದು ಬೇಡವೆಂಬ ಅಭಿಪ್ರಾಯವನ್ನು ಸಭೆಗೆ ವ್ಯಕ್ತಪಡಿಸಿದರು.<br><br>4. ಮಾನ್ಯ ಸದಸ್ಯರಾದ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿನ ವಿದ್ಯಾರ್ಥಿನಿಲಯವು ಸರಿಯಾಗಿ ಬಳಕೆ |

| | |
|---|---|
| | ಆಗುತ್ತಿಲ್ಲ. ಅದರ ಕಡೆ ಗಮನಹರಿಸಬೇಕೆಂದರು ಹಾಗೂ ಮಹಿಳಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವು ಇಲ್ಲದಿರುವುದರಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿದೆ ಎಂದು ಸಭೆಗೆ ತಿಳಿಸಿದರು. |
| **ತೀರ್ಮಾನ** | ಮೇಲ್ಕಂಡ ಮಾನ್ಯ ಸದಸ್ಯರುಗಳ ಅಭಿಪ್ರಾಯ/ಸಲಹೆಗಳನ್ನು ಆಲಿಸಿದ ಸಭೆಯು ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಂಡಿತು.<br>1. ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಬಗ್ಗೆ ಮೂರು ಅಥವಾ ನಾಲ್ಕು ಸಿಂಡಿಕೇಟ್ ಸದಸ್ಯರುಗಳುಳ್ಳ ಒಂದು ಉಪಸಮಿತಿ ರಚಿಸಿ, ತೀರ್ಮಾನ ಕೈಗೊಂಡು ನಂತರ ತೀರ್ಮಾನಗಳು ಅನುಷ್ಠಾನಗೊಳ್ಳುವಂತೆ ಕ್ರಮ ಕೈಗೊಳ್ಳುವುದು.<br>2. ಸಂಪರ್ಕಾಧಿಕಾರಿ, ವಿದ್ಯಾರ್ಥಿನಿಲಯ ಹಾಗೂ ಎಂಜಿನಿಯರಿಂಗ್ ವಿಭಾಗ,ಈ ಹುದ್ದೆಯನ್ನು ರದ್ದು ಮಾಡಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಯಿತು.<br>3. ಇದೇ ಶೈಕ್ಷಣಿಕ ವರ್ಷದಿಂದ ಎಲ್ಲಾ ವಿದ್ಯಾರ್ಥಿಗಳಿಗೂ, ಸಿಬ್ಬಂದಿ ವರ್ಗದವರಿಗೂ ಗುರುತಿನ ಚೀಟಿಯನ್ನು ವಿತರಿಸಲು ತೀರ್ಮಾನಿಸಲಾಯಿತು.<br>4. ಮುಂದಿನ ಸಿಂಡಿಕೇಟ್ ಸಭೆ ನಡೆಯುವುದೊರಳಗೆ ಚಾಮರಾಜನಗರ ಸ್ನಾತಕೋತ್ತರ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ವಿದ್ಯಾರ್ಥಿನಿಲಯಗಳ ವ್ಯವಸ್ಥೆ ಬಗ್ಗೆ ಪರಿಶೀಲಿಸಿ, ಮುಂದಿನ ಕ್ರಮ ಕೈಗೊಳ್ಳುವುದು.<br>5. ಜನವರಿ ಅಥವಾ ಫೆಬ್ರವರಿ ಮಾಹೆಯಲ್ಲಿ ನಡೆಯುವ ಸಿಂಡಿಕೇಟ್ ಸಭೆಯನ್ನು ಸ್ನಾತಕೋತ್ತರ ಕೇಂದ್ರ, ಚಾಮರಾಜನಗರದಲ್ಲಿ ಏರ್ಪಡಿಸಿ, ಸದರಿ ಕೇಂದ್ರಗಳ ಆಡಳಿತ ವೈಖರಿಯನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುವುದು. |
| **2020/11.3** | ಪ್ರೊ. ನಿಂಗಮ್ಮ ಸಿ. ಬೆಟ್ಸೂರ್, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರು ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮೂರು ವರ್ಷದ ಅವಧಿಗೆ ನಿಯೋಜನೆ ಮಾಡಿಕೊಡುವಂತೆ ಕೋರಿರುವುದರ ಬಗ್ಗೆ. |
| ತೀರ್ಮಾನ | ಪ್ರೊ.ನಿಂಗಮ್ಮ ಸಿ.ಬೆಟ್ಸೂರ್, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರು ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮೂರು ವರ್ಷದ ಅವಧಿಗೆ ನಿಯೋಜನೆ ಮಾಡಿಕೊಡುವಂತೆ ಕೋರಿರುವ ಮನವಿಯನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಂಡಿತು.<br>1. ಅಧ್ಯಾಪಕರುಗಳು ಒಂದು ವಿಶ್ವವಿದ್ಯಾನಿಲಯದಿಂದ ಇನ್ನೊಂದು ವಿಶ್ವವಿದ್ಯಾನಿಲಯಕ್ಕೆ ನಿಯೋಜನೆಗೊಳ್ಳುವ ಪ್ರಕ್ರಿಯೆಗಳು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಲ್ಲಿ ತೀರ್ಮಾನವಾಗಬೇಕಾಗಿರುತ್ತದೆ ಹಾಗೂ ಎರಡು ವಿಶ್ವವಿದ್ಯಾನಿಲಯಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಬೇಕಾಗಿರುತ್ತದೆ.<br>2. ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರೊ.ನಿಂಗಮ್ಮ ಸಿ.ಬೆಟ್ಸೂರ್ ರವರು ಹಿರಿಯ ಪ್ರಾಧ್ಯಾಪಕರಾಗಿದ್ದು, ಇವರನ್ನು ಬೇರೆ ವಿಶ್ವವಿದ್ಯಾನಿಲಯಕ್ಕೆ ನಿಯೋಜನೆಗೊಳಿಸಿದರೆ, ಸದರಿ ವಿಭಾಗಕ್ಕೆ ತಾತ್ಕಾಲಿಕ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಬೇಕಾಗುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಬೀಳುತ್ತದೆ ಹಾಗೂ ಸದರಿರವರೆಗೆ ವಿಶ್ವವಿದ್ಯಾನಿಲಯವು ವೇತನವನ್ನು ನೀಡಿ ಅವರ ಸೇವೆಯನ್ನು ಬೇರೆಯವರು ಪಡೆಯುವುದು ಉಚಿತವಲ್ಲವೆಂದು ಭಾವಿಸಿ, ಸದರಿಯವರ ಮನವಿಯನ್ನು ಪುರಸ್ಕರಿಸದಿರಲು ಸಭೆಯು ತೀರ್ಮಾನಿಸಿತು. |

| | |
|---|---|
| **2020/11.4** | Retirement of Post-Graduate Teachers during the Calendar year 2021 |
| | The syndicate may permit the teachers to retire from the university service have attained the age of superannuation or it may continue the services of such teachers till the end of the academic year as per provisions under clause (3) of then University Employees (condition and service) Status 1984, if they found physically fit and otherwise suitable, on re-employment basis.<br><br>The syndicate consideration and decision regard to permitting the above teachers to retire on the date mentioned against their names and also for re-employment on contractual basis if required till the end of the respective semesters.<br><br>ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕರ ಕೊರತೆ ಇರುವುದರಿಂದ, ನಿರಂತರವಾಗಿ ಖಾಯಂ ಅಧ್ಯಾಪಕರು ನಿವೃತ್ತಿ ಹೊಂದುತ್ತಿದ್ದು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಖಾಯಂ ಅಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ ಅನುಮತಿ ಕೋರಬಹುದಾಗಿದೆಯೆಂದು ಸಭೆಯು ಅಭಿಪ್ರಾಯಿಸಿತು. |
| **Decision** | **Approved** |
| **2020/11.5** | ವೋಗ್ ಇನ್ಸಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಎ.ಡಿ.ಬಿಳಿಗೌಡ, ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾಲ್ಲೋಕು, ಮಂಡ್ಯ ಜಿಲ್ಲೆ, ಈ ಸಂಸ್ಥೆಯಲ್ಲಿ ಸ್ಪೆಷಲೈಷ್ಡ್ ಪ್ರೋಗ್ರಾಂ ಅಡಿಯಲ್ಲಿ 02 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡಿರುವ ಸಂಬಂಧ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯ ತಜ್ಞರನ್ನೊಳಗೊಂಡ ಪರಿವೀಕ್ಷಣಾ ಸಮಿತಿಯು ದಿನಾಂಕ 20-10-2020 ರಂದು ವೋಗ್ ನ್ಸಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯಲ್ಲಿನ ಮೂಲಭೂತಸೌಲಭ್ಯಗಳನ್ನು ಆನ್‌ಲೈನ್ ಮೂಲಕ ಪರಿಶೀಲಿಸಿ ವರದಿಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸನ್ನು ನೀಡಿರುತ್ತದೆ.<br><br>"The expert committee recommends that, granting of recognition for additional specialized programmes in 1.M.Des (Fashion Design Management)-with an intake of fourty (40)); 2. M.Des (Interior Design Management)- with an intake of fourty (40) to Vogue Institute of Fashion Technology, Koppa, Maddur Taluk, under the provision of "The University of Mysore-Recognition of Certain Institutions for Specified Studies/Specialized and Research Statutes 2008" from the academic year 2020-21".<br><br>ಮೇಲ್ಕಂಡ ಪರಿವೀಕ್ಷಣಾ ಸಮಿತಿಯ ವರದಿಯನುಸಾರ "The University of Mysore - Recognition of certain institutions for Specified Studies/ |

| | |
|---|---|
| | Specialized and Research Statutes 2008" ಅಧಿನಿಯಮದಲ್ಲಿನ ಅವಕಾಶದನುಸಾರ, ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ವೋಗ್ ಇನ್ಸಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಎ.ಡಿ.ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾಲ್ಲೋಕು, ಮಂಡ್ಯ ಜಿಲ್ಲೆ ಈ ಸಂಸ್ಥೆಯಲ್ಲಿ ಸ್ಪೆಷಲೈಜ್ಡ್ ಪ್ರೋಗ್ರಾಂ ಅಡಿಯಲ್ಲಿ ಹೊಸದಾಗಿ ಮೇಲ್ಕಂಡ ಎರಡು ಹೆಚ್ಚುವರಿ ಕೋರ್ಸುಗಳನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿಸಿ ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಅನುಸಮರ್ಥಿಸಿತು. |
| **2020/11.6** | ಪಿ.ಇ.ಟಿ ರಿಸರ್ಚ್ ಫೌಂಡೇಷನ್, ಪಿ.ಇ.ಎಸ್, ಕಾಲೇಜ್ ಆಫ್ ಇಂಜಿನಿಯರಿಂಗ್, ಮಂಡ್ಯ ಇವರಿಗೆ ಹೊಸದಾಗಿ Commerce ಮತ್ತು Managementವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಪರೀವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ದಿನಾಂಕ 06-11-2020 ರಂದು ವಿಶ್ವವಿದ್ಯಾನಿಲಯದ ತಜ್ಞರನ್ನೊಳಗೊಂಡ ಪರಿವೀಕ್ಷಣಾ ಸಮಿತಿಯು ಆನ್‌ಲೈನ್ ಮುಖಾಂತರ ಪಿ.ಇ.ಟಿ. ರೀಸರ್ಚ್ ಫೌಂಡೇಷನ್, ಪಿ.ಇ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್, ಮಂಡ್ಯ ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಮಾಹಿತಿಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ತನ್ನ ವರದಿಯಲ್ಲಿ ಶಿಫಾರಸ್ಸನ್ನು ನೀಡಿರುತ್ತದೆ.<br>" The expert committee unanimously recommends that granting of recognition to PET Research Foundation, PES college of Engineering, Mandya for carrying out research studies in the disciplines of Commerce and Management from the academic year 2020-21"<br>ಮೇಲಿನ ಸಮಿತಿಯ ಶಿಫಾರಸ್ಸಿನ ಅನ್ವಯ ಪಿ.ಇ.ಟಿ. ರೀಸರ್ಚ್ ಫೌಂಡೇಷನ್, ಪಿ.ಇ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್, ಮಂಡ್ಯ ಸಂಸ್ಥೆಗೆ "ಕಾಮರ್ಸ್" ಮತ್ತು "ಮ್ಯಾನೇಜ್‌ಮೆಂಟ್" ವಿಷಯಗಳಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಅನುಮೋದಿಸಿತು. |
| **ಸಾಮಾನ್ಯ ಸಭೆ 2020/11.7** | ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ನ್ಯೂ ಟೌನ್, ಬೆಂಗಳೂರು ಇವರಿಗೆ ಹೊಸದಾಗಿ Commerce ಮತ್ತು Managementವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಅನುಮೋದನೆಗೆ ಸಲ್ಲಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 14-11-2020 ರಂದು ವಿಶ್ವವಿದ್ಯಾನಿಲಯದ ತಜ್ಞರನ್ನೊಳಗೊಂಡ ಪರಿವೀಕ್ಷಣಾ ಸಮಿತಿಯು ಆನ್‌ಲೈನ್ ಮುಖಾಂತರ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ತನ್ನ ವರದಿಯಲ್ಲಿ ಶಿಫಾರಸ್ಸನ್ನು ನೀಡಿರುತ್ತದೆ.<br>"The expert committee unanimously recommends that granting of recognition to Seshadripuram First Grade College, Yalahanka New Town Bengaluru-560 064 for carrying out research studies in the |

| | |
|---|---|
| | disciplines of Commerce and Management from the academic year 2020-21"<br>ಮೇಲಿನ ಸಮಿತಿಯ ಶಿಫಾರಸ್ಸಿನ ಅನ್ವಯ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿಗೆ "ಕಾಮರ್ಸ್" ಮತ್ತು "ಮ್ಯಾನೇಜ್‌ಮೆಂಟ್" ವಿಷಯಗಳಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಿ, ದಿನಾಂಕ 03-11-2020 ರಂದು ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಅನುಸಮರ್ಥಿಸಿತು. |
| **2020/11.8** | ದಿವಂಗತ ಶ್ರೀ.ರಾಮ್‌ಸಿಂಗ್, ಸೇವಕ, ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಮಗನಾದ ಶ್ರೀ.ರೋಹಿತ್.ಆರ್‌ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| | ಡಾ. ಈ.ಸಿ.ನಿಂಗರಾಜ್‌ಗೌಡರವರು ಮಾತನಾಡಿ, ದಿವಂಗತ ಶ್ರೀ ರಾಮ್‌ಸಿಂಗ್, ಸೇವಕ, ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಮಗನಾದ ಶ್ರೀ ರೋಹಿತ್.ಆರ್‌ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ ಯಾವುದೇ ಅಭ್ಯಂತರವಿಲ್ಲವೆಂದು, ವಿಷಯವನ್ನು ಮಂಡಿಸುವಾಗ ವಿವರವಾಗಿ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿ ಸಭೆಗೆ ಮಂಡಿಸಬೇಕೆಂದು ತಿಳಿಸಿದರು.<br><br>ಸಭೆಯು ಮಾನ್ಯ ಸದಸ್ಯರ ಸಲಹೆಯನ್ನು ಅನುಮೋದಿಸಿತು. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಸೆಕ್ಷನ್ 4(1)ರ ಅನ್ವಯ, ಶ್ರೀ.ರೋಹಿತ್.ಆರ್ ರವರಿಗೆ ಅನುಕಂಪದ ಆಧಾರದ ಮೇಲೆ ಸೇವಕರ ಹುದ್ದೆಯಲ್ಲಿ ನೇಮಕಾತಿ ಮಾಡುವ ಬಗೆಗಿನ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **2020/11.9** | Fortuna Advanced Institute of Research and Studies (FAIR), ಇವರ ಸಂಸ್ಥೆಗೆ Specialized Programmeಅಡಿಯಲ್ಲಿ B.Sc (Biomedical Science), B.Sc. (Artificial Intelligence and Data Analytics) and B.Sc.(Hons.) (Advanced Agriculture) ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವ ಸಂಬಂಧ ಅನುಮೋದನೆಯನ್ನು ಕೋರುವ ಬಗ್ಗೆ. |
| | ದಿನಾಂಕ 09-11-2020 ರಂದು ವಿಶ್ವವಿದ್ಯಾನಿಲಯದ ತಜ್ಞರನ್ನೊಳಗೊಂಡ ಪರಿವೀಕ್ಷಣಾ ಸಮಿತಿಯು Fortuna Advanced Institute of Research and Studies (FAIR), ದೇವಿರಮ್ಮನಹಳ್ಳಿ, ನಂಜನಗೂಡು ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ, ವರದಿಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸನ್ನು ನೀಡಿರುತ್ತದೆ.<br>"The expert committee recommends that, granting of recognition for specialized programmes in 1. B.Sc.(Biomedical Science) – with an intake of forty (40), 2. B.Sc. (Artificial Intelligence & Data Analytics)-with an intake of forty (40) and 3. B.Sc(Hons.) (Advanced Agriculture)-with an intake of forty (40) to Fortuna Advanced Institute of Research & Studies (Fair), Devinagar, 1st Main Road, Deveerammanahalli, Nanjangud Taluk, Mysuru Dist., under the provision of "The University of Mysore –Recognition of Certain |

| | |
|---|---|
| | Institutions for Specified Studies/Specialized and Research Statutes 2008" from the academic year 2020-21" |
| ತೀರ್ಮಾನ | ಮೇಲ್ಕಂಡ ಪರಿವೀಕ್ಷಣಾ ಸಮಿತಿಯ ವರದಿಯನುಸಾರ ಮತ್ತು "The University of Mysore Recognition of Certain Institutions for Specified/Specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ, ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, Fortuna Advanced Institute of Research & studies (FAIR), ದೇವಿರಮ್ಮನಹಳ್ಳಿ, ನಂಜನಗೂಡು ಈ ಸಂಸ್ಥೆಯಲ್ಲಿ Specialized Programmeಅಡಿಯಲ್ಲಿ ಹೊಸದಾಗಿ ಮೇಲ್ಕಂಡ ಕೋರ್ಸುಗಳನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿಸಿ, ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಪರಿಶೀಲಿಸಿ, ಅನುಸಮರ್ಥಿಸಿತು. |
| **2020/11.10** | ಶಾರದ ವಿಲಾಸ ಶಿಕ್ಷಣ ಸಂಸ್ಥೆ, ಕೃಷ್ಣಮೂರ್ತಿಪುರಂ, ಮೈಸೂರು ಇವರ ಸಂಸ್ಥೆಯಲ್ಲಿSpecialized Programme ಅಡಿಯಲ್ಲಿ ಹೆಚ್ಚುವರಿಯಾಗಿ PG Diploma in E-Commerce and Digitization (PGD-ECD)ಕೋರ್ಸ್‌ಅನ್ನು ಪ್ರಾರಂಭಿಸಲು ಅನುಮತಿ ನೀಡಿರುವ ಸಂಬಂಧ ಅನುಮೋದನೆಯನ್ನು ಕೋರುವ ಬಗ್ಗೆ. |
| | ದಿನಾಂಕ 05-11-2020 ರಂದು ವಿಶ್ವವಿದ್ಯಾನಿಲಯದ ತಜ್ಞರನ್ನೊಳಗೊಂಡ ಪರಿವೀಕ್ಷಣಾ ಸಮಿತಿಯು ಶಾರದ ವಿಲಾಸ ಶಿಕ್ಷಣ ಸಂಸ್ಥೆ, ಕೃಷ್ಣಮೂರ್ತಿ ಪುರಂ, ಮೈಸೂರು ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ, ತನ್ನ ವರದಿಯಲ್ಲಿ ಈ ಕೆಳಕಂಡಂತೆಶಿಫಾರಸ್ಸನ್ನು ನೀಡಿರುತ್ತದೆ.<br>"The expert committee recommends that, granting of recognition for specialized programmes in PG Diploma in E-Commerce and Digitization (PGD-ECD)-with an intake of Sixty (60) to Sarada Vilas Educational Institutions, Saradavilas Road, Krishnamurthypuram, Mysuru under the provision of "The University of Mysore-Recognition of Certain Institutions for Specified Studies/Specialized and Research Statutes 2008" from the academic year 2020-21". |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ವರದಿಯನುಸಾರ ಮತ್ತು "The University of Mysore Recognition of Certain Institutions for Specified/Specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ, ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ~~Fortuna Advanced Institute of Research & studies (FAIR)~~, ಶಾರದ ವಿಲಾಸ ಶಿಕ್ಷಣ ಸಂಸ್ಥೆ, ಕೃಷ್ಣಮೂರ್ತಿ ಪುರಂ, ಮೈಸೂರು ಈ ಸಂಸ್ಥೆಯಲ್ಲಿSpecialized Programmeಅಡಿಯಲ್ಲಿ ಹೊಸದಾಗಿ ಮೇಲ್ಕಂಡ ಕೋರ್ಸ ಅನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿಸಿ, ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಅನುಸಮರ್ಥಿಸಿತು. |
| **2020/11.11** | ದಿನಾಂಕ: 01-04-2006ರಂದು ಮತ್ತು ನಂತರ ಸೇವೆಗೆ ಸೇರಿದ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ ಉದ್ಯೋಗದಾತರ ಪಿಂಚಣಿ ವಂತಿಕೆಯನ್ನು ಶೇ.10 ರಿಂದ 14ಕ್ಕೆ ಹೆಚ್ಚಿಸುವ ಬಗೆಗೆ. |
| ತೀರ್ಮಾನ | ಸರ್ಕಾರದ ಮತ್ತು ವಿಶ್ವವಿದ್ಯಾನಿಲಯಗಳ ಆದೇಶಗಳನ್ವಯ, ದಿನಾಂಕ: 01-04-2006ರಂದು ಮತ್ತು ನಂತರ ಸೇವೆಗೆ ಸೇರಿದ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ ಉದ್ಯೋಗದಾತರ ಪಿಂಚಣಿ ವಂತಿಕೆಯನ್ನು ಶೇ.10 ರಿಂದ 14ರಂತೆ (ಮೂಲ ವೇತನ + |

<table>
<tr><td></td><td>ತುಟ್ಟಿ ಭತ್ಯೆ) ಲೆಕ್ಕಾಚಾರ ಮಾಡಿ ದಿನಾಂಕ 01-04-2019 ರಿಂದ 31-07-2020ರವರೆಗಿನ ಒಟ್ಟು 284 ಉದ್ಯೋಗಿಗಳ ಉದ್ಯೋಗಿ ವಂತಿಕೆ ವ್ಯತ್ಯಾಸದ ಮೊತ್ತ ರೂ.95,54,835/-ಗಳನ್ನು ಪಾವತಿಸಬೇಕಾಗಿದ್ದು, ಈ ಮೊತ್ತವನ್ನು ವಿಶ್ವವಿದ್ಯಾನಿಲಯದ ರೆವಿನ್ಯೂ ಖಾತೆಯಿಂದ ಪಾವತಿಸಲು ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಮರುಭರಿಕೆ ಮಾಡಿಕೊಳ್ಳಲು ದಿನಾಂಕ 06-10-2020ರಂದು ನಡೆದ ಹಣಕಾಸು ಸಮಿತಿಯು ಅನುಮತಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಅನುಮೋದಿಸಿತು.</td></tr>
<tr><td>2020/11.12</td><td>ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಿರುವ ಮೈಸೂರು "ತೆರೆಸಿಯನ್ ರಿಸರ್ಚ್ ಫೌಂಡೇಶನ್" ಹೆಸರನ್ನು "ತೆರೆಸಿಯನ್ ಕಾಲೇಜ್ ರಿಸರ್ಚ್ ಸೆಂಟರ್" ಎಂದು ಬದಲಾವಣೆ ಮಾಡಲು ಕೋರಿರುವ ಬಗ್ಗೆ.</td></tr>
<tr><td>ತೀರ್ಮಾನ</td><td>ತೆರೆಸಿಯನ್ ರಿಸರ್ಚ್ ಫೌಂಡೇಶನ್, ತೆರೆಸಿಯನ್ ಕಾಲೇಜು, ಮೈಸೂರು ಸಂಸ್ಥೆಗೆ Biotechnology ಮತ್ತು Commerce ವಿಷಯಗಳಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಿರುವ ಸಂಬಂಧ, ಪ್ರಸ್ತುತ, ತೆರೆಸಿಯನ್ ರಿಸರ್ಚ್ ಫೌಂಡೇಷನ್‌ನ ನಿರ್ದೇಶಕರು ಸಂಶೋಧನಾ ಕೇಂದ್ರದ ಮಾನ್ಯತೆಯನ್ನು "ತೆರಿಸಿಯನ್ ರಿಸರ್ಚ್ ಫೌಂಡೇಶನ್" ಎಂಬ ಹೆಸರಿನ ಬದಲಿಗೆ "ತೆರಿಸಿಯನ್ ಕಾಲೇಜ್ ರಿಸರ್ಚ್ ಸೆಂಟರ್" ಎಂದು ಬದಲಾವಣೆ ಮಾಡಲು ನಿಯಮಾನುಸಾರ ರೂ.41,750/-ಗಳ ಶುಲ್ಕವನ್ನು ಪಾವತಿಸಿ, ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿದ ಸಭೆಯು, ಈ ಕೆಳಕಂಡಂತೆ ಸದರಿ ಸಂಸ್ಥೆಗೆ ನೀಡಿರುವ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ಬದಲಾವಣೆ ಮಾಡಲು ಅನುಮತಿ ನೀಡಿತು.
<table>
<tr><th>Existing Name</th><th>Revised Name</th></tr>
<tr><td>Teresian Research Foundation, Teresian College, #1824, Bannur Road, Siddharthanagar, Mysuru-570011</td><td>Teresian College Research Centre, #1824, Bannur Road, Siddharthanagar,Mysuru-570011</td></tr>
</table></td></tr>
<tr><td>2020/11.13</td><td>Retirement of Teachers of Constituent Colleges during the Calendar Year 2021</td></tr>
<tr><td></td><td>The syndicate may permit the teachers to retire from the university service have attained then age of superannuation or it may continue the services of such teachers till the end of the academic year as per provisions under clause (3) of the University Employees (condition and service) Status 1984, if they found physically fit and otherwise suitable, on re-employment basis. At present, the University is continuing the retired teachers till the end of the semesters only.<br><br>The syndicate consideration and decision regard to permitting the above teachers to retire on then date mentioned against their names and also for re-employment on contractual basis if required till the end of the respective semesters.</td></tr>
<tr><td>Decision</td><td>Approved</td></tr>
<tr><td>2020/11.14</td><td>ಪ್ರೊ. ಸಿ. ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು. ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿರುವ ಬಗ್ಗೆ.</td></tr>
<tr><td>ತೀರ್ಮಾನ</td><td>ಪ್ರೊ. ಸಿ.ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಇವರು ತಮ್ಮನ್ನು "ಸಂದರ್ಶಕ ಪ್ರಾಧ್ಯಾಪಕರು ಅಥವಾ ಸೂಕ್ತವಾದ ಬೇರೆ ಪದನಾಮದೊಂದಿಗೆ"</td></tr>
</table>

| | |
|---|---|
| | ನೇಮಕ ಮಾಡಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಪ್ರಸ್ತುತ 09 ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿರವರನ್ನು ಲಭ್ಯವಿರುವ ಒಂದು ಸಂದರ್ಶಕ ಪ್ರಾಧ್ಯಾಪಕ ಹುದ್ದೆಗೆ ಎದುರಾಗಿ ಪ್ರೊ.ಸಿ.ನಾಗಣ್ಣ, ನಿವೃತ್ತ ಪ್ರಾದ್ಯಾಪಕರು, ಇವರಿಗೆ ಈಗಾಗಲೇ ವಿಶ್ವವಿದ್ಯಾನಿಲಯವು ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ, ಆಹ್ವಾನಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/11.15** | ಶ್ರೀ.ಎ.ಮಂಜೇಶ, ದ್ವಿತೀಯ ದರ್ಜೆ ಗುಮಾಸ್ತರು, ಪ್ರಸಾರಂಗ, ಮಾನಸಗಂಗೋತ್ರಿ, ಮೈಸೂರು ಇವರ ಕರ್ತವ್ಯದಲ್ಲಿನ ನಿರ್ಲಕ್ಷತೆ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ಎ.ಮಂಜೇಶ, ದ್ವಿತೀಯ ದರ್ಜೆ ಗುಮಾಸ್ತರು, ಪ್ರಸಾರಂಗ, ಮಾನಸಗಂಗೋತ್ರಿ, ಮೈಸೂರು ಇವರ ನಿರ್ಲಕ್ಷತೆ ಹಾಗೂ ಅಜಾಗರೂಕತೆಯಿಂದಾಗಿ ಪ್ರಸಾರಾಂಗದ ಪುಸ್ತಕ ಮಾರಾಟ ಮಳಿಗೆಯಲ್ಲಿ ರೂ.2,53,237/-ಗಳ ಮೌಲ್ಯದ ಪುಸ್ತಕಗಳು ಕಣ್ಮರೆಯಾಗಿರುವ ಹಿನ್ನೆಯಲ್ಲಿ, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು, ಇವರ ಈ ನಡತೆಯು ವಿಶ್ವವಿದ್ಯಾನಿಲಯದ ಸಿಸಿಏ ಅಧಿನಿಯಮ 1983ರ ಪ್ರಕಾರ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ವಿಚಾರಣಾ ಸಮಿತಿಯನ್ನು ನಡೆಸಿ, ಆರೋಪಣಾ ಪಟ್ಟಿ ಮತ್ತು ದೋಷಾರೋಪಣ ಪಟ್ಟಿಯನ್ನು ಸಿದ್ದಪಡಿಸುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/11.16 | ಇತಿಹಾಸ ಅಧ್ಯಯನ ವಿಭಾಗದ, ಕಾನೂನು ಅಧ್ಯಯನ ವಿಭಾಗ, ಸಾವಯವ ರಸಾಯನಶಾಸ್ತ್ರ ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡಿರುವ ಬಗ್ಗೆ ಸಿಂಡಿಕೇಟಿನ ಸಭೆಯ ಅನುಸಮರ್ಥನೆಗಾಗಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯವು ಇತಿಹಾಸ ಅಧ್ಯಯನ ವಿಭಾಗದ, ಕಾನೂನು ಅಧ್ಯಯನ ವಿಭಾಗ, ಸಾವಯವ ರಸಾಯನಶಾಸ್ತ್ರ ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗಗಳಿಗೆ ಈ ಕೆಳಕಂಡಂತೆ ವಿಭಾಗದ ಅಧ್ಯಕ್ಷರುಗಳನ್ನು ನೇಮಕ ಮಾಡಿರುವ ಕ್ರಮವನ್ನು ಅನುಸಮರ್ಥಿಸಿತು.<br>1. ಡಾ: ಪುಟ್ಟಯ್ಯ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 15.10.2020 ರಂದು ಅಕಾಲಿಕ ಮರಣ ಹೊಂದಿರುವುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ2000, ಪ್ರಕರಣ34(7) ಪ್ರಕಾರ, ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ:ಜಿ.ಟಿ.ಸೋಮಶೇಖರ್, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಕಾರಣಾಂತರಗಳಿಂದ ನನ್ನನ್ನು ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಈ ಬಾರಿ ಪರಿಗಣಿಸದಂತೆ ಮನವಿ ಮಾಡಿಕೊಂಡಿರುವುದರಿಂದ, ನಂತರದ ಜೇಷ್ಠತೆಯಲ್ಲಿ ಹಿರಿಯರಾದ ಡಾ:ಆರ್.ರಾಜಣ್ಣ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ21.10.2020ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು.<br>2. ಪ್ರೊ.ಬಸವರಾಜು, ಪ್ರಾಧ್ಯಾಪಕರು, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 01.11.2018 ರಿಂದ ಅನ್ವಯವಾಗುವಂತೆ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 31.10.2020ಕ್ಕೆ ಮುಗಿದಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ2000, ಪ್ರಕರಣ34(7) ಪ್ರಕಾರ, ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ:ರಮೇಶ್, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 02.11.2020 ರಿಂದ |

| | |
|---|---|
| | ಅನ್ವಯವಾಗುವಂತೆ ಮುಂದಿನ ಎರಡು ವರ್ಷಗಳ ಅವಧಿಗೆ ಕಾನೂನು ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು.<br><br>3. ಡಾ: ಬಸಪ್ಪ, ಸಹಾಯಕ ಪ್ರಾಧ್ಯಾಪಕರು, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 21.11.2018ರಿಂದ ಅನ್ವಯವಾಗುವಂತೆ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 19.11.2020ಕ್ಕೆ ಮುಗಿದಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ2000, ಪ್ರಕರಣ34(7) ಪ್ರಕಾರ, ಜೇಷ್ಠತೆಯಲ್ಲಿ ಹಿರಿಯರಾಗಿರುವವರನ್ನು ನೇಮಕ ಮಾಡಬೇಕಾಗಿತ್ತು, ಆದರೆ ಈ ವಿಭಾಗದಲ್ಲಿ ಇವರನ್ನು ಬಿಟ್ಟು ಬೇರೆ ಯಾರೂ ಖಾಯಂ ಪ್ರಾಧ್ಯಾಪಕರುಗಳಾಗಲೀ/ಅಧ್ಯಾಪಕರುಗಳಾಗಲೀ ಇಲ್ಲದಿರುವುದರಿಂದ ಡಾ:ಬಸಪ್ಪ, ಸಹಾಯಕ ಪ್ರಾಧ್ಯಾಪಕರು ಅವರನ್ನೇ ದಿನಾಂಕ 19.11.2020ರಿಂದ ಅನ್ವಯವಾಗುವಂತೆ ಮುಂದಿನ ಎರಡು ವರ್ಷಗಳ ಅವಧಿಗೆ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು.<br><br>4. ಡಾ:ಸುರೇಶ್, ಪ್ರಾಧ್ಯಾಪಕರು, ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 24.11.2018 ರಿಂದ ಅನ್ವಯವಾಗುವಂತೆ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 23.11.2018ಕ್ಕೆ ಮುಗಿದಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ2000, ಪ್ರಕರಣ34(7) ಪ್ರಕಾರ, ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ.ಡಿ.ಎಸ್.ಗುರು, ಪ್ರಾಧ್ಯಾಪಕರು, ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 23.11.2020ರಿಂದ ಅನ್ವಯವಾಗುವಂತೆ ಮುಂದಿನ ಎರಡು ವರ್ಷಗಳ ಅವಧಿಗೆ ಗಣಕ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು.<br><br>ಪ್ರೊ. ಎಸ್.ಡಿ.ದೊಡ್ಡಾಚಾರಿ ಹಾಗೂ ಡಾ: ಈ.ಸಿ.ನಿಂಗರಾಜ ಗೌಡರವರು ಅನುಸಮರ್ಥನೆಗಾಗಿ ಮಂಡಿಸುವುದು ಸರಿಯಾದ ಕ್ರಮವಲ್ಲವಾದ್ದರಿಂದ ಇನ್ನು ಮುಂದೆ ವಿಭಾಗದ ಅಧ್ಯಕ್ಷರ ಅವಧಿ ಮುಗಿಯುವ 03 ತಿಂಗಳ ಮುಂಚಿತವಾಗಿ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಬೇಕೆಂದು ತಿಳಿಸಿದರು.<br><br>ಇದಕ್ಕೆ ಮಾನ್ಯ ಕುಲಪತಿಗಳು ಒಪ್ಪಿಗೆಯನ್ನು ಸೂಚಿಸಿದರು. |
| 2020/11.17 | ಡಾ: ಎಂ.ಪಿ. ರೇಖಾ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕಾವೇರಿ ಪದವಿ ಕಾಲೇಜು, ಗೋಣಿಕೊಪ್ಪ, ಕೊಡಗು ಜಿಲ್ಲೆ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು, ಮೈಸೂರು ಇಲ್ಲಿಗೆ ನಿಯೋಜನೆ ಮೇರೆಗೆ ವರ್ಗಾಯಿಸಿ ಆದೇಶಿಸಿರುವ ಬಗ್ಗೆ. |
| **ತೀರ್ಮಾನ** | ಡಾ: ಎಂ.ಪಿ.ರೇಖಾ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕಾವೇರಿ ಪದವಿ ಕಾಲೇಜು ಗೋಣಿಕೊಪ್ಪ, ಕೊಡಗು ಜಿಲ್ಲೆ ಇವರು ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು, ಮೈಸೂರು ಇಲ್ಲಿಗೆ ನಿಯೋಜನೆ ಕುರಿತ ಘನಸರ್ಕಾರದ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಕ್ರಮಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| 2020/11.18 | ಮೈಸೂರು ಸ್ಕೂಲ್ ಆಫ್ ಡಿಸೈನ್, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 1) B.Sc. (Interior Design and Decoration) ಮತ್ತು |

| | |
|---|---|
| | 2) B.Voc.(Interior Design) ಕೋರ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಕುರಿತು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ಮೈಸೂರು ಸ್ಕೂಲ್ ಆಫ್ ಡಿಸೈನ್, ಮೈಸೂರು ವಿಶ್ವವಿದ್ಯಾನಿಲಯದ Specialized Centre ಅಡಿಯಲ್ಲಿ ಹೊಸದಾಗಿ 1) B.Sc. (Interior Design and Decoration) ಮತ್ತು 2) B.Voc.(Interior Design) ಕೋರ್ಸ್‌ಗಳನ್ನು ತಲಾ 40 ಪ್ರವೇಶಮಿತಿಯನ್ನು ನಿಗದಿಪಡಿಸಿ 2021-2022ನೇ ಸಾಲಿನಿಂದ Specialized Programme ಅಡಿಯಲ್ಲಿ ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧದ ವಿಷಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು |
| 2020/11.19 | ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠಕ್ಕೆ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮದ ಅನುಮೋದನೆಗಾಗಿ ಹಾಗೂ ಅಧ್ಯಯನ ಪೀಠದ ಉದ್ದೇಶಗಳ ಕಾರ್ಯರೂಪಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| | ಶ್ರೀ.ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ರವರು ಕ್ಷೇತ್ರ ಸಹಾಯಕರಾಗಿ ಸಂಚಿತ ವೇತನದಲ್ಲಿ ಒಬ್ಬರನ್ನು ನೇಮಕ ಮಾಡಬೇಕೆಂದು ಕೋರಿದರು ಹಾಗೂ ಚಾಮರಾಜನಗರ ಜಿಲ್ಲೆಯ ಸ್ಥಳೀಯರಿಗೆ ಆದ್ಯತೆ ನೀಡಬೇಕೆಂದು ಮನವಿ ಮಾಡಿದರು.<br>ಪೀಠದ ಹೆಸರಿನಲ್ಲೆ ಕ್ಷೇತ್ರ ಸಹಾಯಕರನ್ನು ನೇಮಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ಮಾನ್ಯ ಕುಲಪತಿಗಳು ತಿಳಿಸಿದರು. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿ ಶ್ರೀ.ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠಕ್ಕೆ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/11.20 | ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು ಈ ಕಾಲೇಜನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಪ್ರಾರಂಭಿಸುವ ಕುರಿತು. |
| ತೀರ್ಮಾನ | ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು ಈ ಕಾಲೇಜು ಕಾರ್ಯನಿರ್ವಹಿಸುತ್ತಿರುವ ಕಟ್ಟಡಗಳನ್ನು ವಿಶ್ವವಿದ್ಯಾನಿಲಯಕ್ಕೆ ವರ್ಗಾಹಿಸಲು ಸಿದ್ದವಿರುವುದರಿಂದ ಸದರಿ ಸ್ಥಳದಲ್ಲಿ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಪರಿವರ್ತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/11.21 | ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕಾವ್ಯಾಧ್ಯಯನ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪರನ್ನು ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು |
| 2020/11.22 | ಡಾ: ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು, ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರು ನಿವೃತ್ತಿ ನಂತರದ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಕೋರಿರುವ ಬಗ್ಗೆ. |
| ತೀರ್ಮಾನ | ಡಾ:ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು, ಇವರು ದಿನಾಂಕ 28.02.2017 ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು, ಇಲ್ಲಿಯವರೆಗೂ ಪೂರ್ಣಪ್ರಮಾಣದ ನಿವೃತ್ತಿ ನಂತರದ ಆರ್ಥಿಕ ಸೌಲಭ್ಯಗಳು ಬಿಡುಗಡೆಗೊಂಡಿರದ ಕಾರಣ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದಾಗಿ ತಿಳಿಸಿರುವುದರಿಂದ ಸದರಿಯವರಿಗೆ ನಿವೃತ್ತಿ ನಂತರದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಶೀಘ್ರವಾಗಿ ಮಂಜೂರು ಮಾಡುವಂತೆ ಕೋರಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2020/11.23 | ಸರ್ಕಾರದಿಂದ 2019ರಲ್ಲಿ ಅನುಮೋದನೆಗೊಂಡಿರುವ ಅಧಿನಿಯಮದಲ್ಲಿ ಕೆಲವು ಪರಿಷ್ಕರಣೆಗಳನ್ನು ಮಾಡುವ ಬಗ್ಗೆ. |

| | | |
|---|---|---|
| ತೀರ್ಮಾನ | Existing | Amended Proposed |
| | 15. Recruitment and Qualifications:<br><br>a) Conditions governing eligibility criteria for direct recruitment to the post of Teachers and other academic staff in the Universities and colleges shall be specified in the "UGC Regulations on Minimum Qualifications for appointment of teachers and other academic staff and measures for maintenance of standards of Higher Education, 2018" and amendments if any issued in this regard from time to time by UGC read with the provisions of the Karnataka Civil Services(General Recruitment) Rules;1977 and orders issued in this regard by the State Government from time to time" | a) Line No.15(a)" after the word "UGC", the next sentence "read with the provisions of the Karnataka Civil Services (General Recruitment Rules; 1977" be deleted. |
| | 30. Repeal:<br><br>Al® the existing statutes in this behalf are hereby repeated. | Except the provisions amended and assented by the Governor and communicated to the University vide letter No.ED/01/UMS/2018 dated 18.08.2018 of this statutes all other provisions of this statutes shall remain the same. |
| | ಸನ್ಮಾನ್ಯ ಕುಲಾಧಿಪತಿಯವರಿಂದ ಅನುಮೋದನೆಗೊಂಡಿರುವ ಅಧಿನಿಯಮದಲ್ಲಿ ಮೇಲಿನಂತೆ ತಿದ್ದುಪಡಿ ಮಾಡುವ ಬಗ್ಗೆ ಮತ್ತು ಸದರಿ ಪರಿಷ್ಕೃತ ತಿದ್ದುಪಡಿಯನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ವಿಷಯವನ್ನು ಸಿಂಡಿಕೇಟ್ ಸಭೆಯು ಒಪ್ಪಲಾಯಿತು. | |
| 2020/11.24 | ಶ್ರೀ.ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. | |
| ತೀರ್ಮಾನ | ಶ್ರೀ.ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.25,000/-ಗಳ ಗೌರವ ಸಂಭಾವನೆಯೊಂದಿಗೆ ಆಹ್ವಾನಿಸಿರುವುದನ್ನು ಸಿಂಡಿಕೇಟ್ ಸಭೆಯ ಅನುಮೋದಿಸಿತು. | |

| | |
|---|---|
| 2020/11.25 | ಕ್ರಿಸ್ತ ಪ್ರಥಮ ದರ್ಜೆ ಕಾಲೇಜು, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ವಿವಿಧ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಕ್ರಿಸ್ತ ಪ್ರಥಮ ದರ್ಜೆ ಕಾಲೇಜು, ಬನ್ನೂರು ರಸ್ತೆ, ಆಲನಹಳ್ಳಿ, ಮೈಸೂರು ಈ ಸಂಸ್ಥೆಗೆ Specialized Programme ಅಡಿಯಲ್ಲಿ 1) BBA (Modelling and Fashion Management), 2).BBA (Communication and Media Management), 3).B.Com (Financial Markets), 4). BCA (Internet of Things), 5). BCA (Cloud Computing and Digital Science) ಕೋರ್ಸ್‌ಗಳನ್ನು ಪ್ರತಿ ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2021–2022ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯ ಸಂಬಂಧದ ವಿಷಯವನ್ನು ಸಿಂಡಿಕೇಟ್ ಸಭೆಯು ಕೊಡಬಹುದೆಂದು ಒಪ್ಪಲಾಯಿತು. |
| 2020/11.26 | ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆಗೊಂಡಿರುವ ಬೌದ್ಧಿಕ ಆಸ್ತಿ ಹಕ್ಕುಗಳ ಘಟಕದಲ್ಲಿ ನಡೆಯಲಿರುವ Patent filing, copyrights and literary works ಅನ್ನು M/s. ALMT Legal, Advocates and Solicitors, Bangalore ಇವರೊಂದಿಗೆ ಮಾಡಿಕೊಳ್ಳುವ ಸಂಬಂಧದ ಕರಡು ಒಡಂಬಡಿಕೆಯ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆಗೊಂಡಿರುವ ಬೌದ್ಧಿಕ ಆಸ್ತಿ ಹಕ್ಕುಗಳ ಘಟಕದಲ್ಲಿ ನಡೆಯಲಿರುವ Patent filing, copyrights and literary works ಅನ್ನು M/s. ALMT Legal, Advocates and Solicitors, Bangalore ಇವರೊಂದಿಗೆ ಮಾಡಿಕೊಂಡಿರುವ ಕರಡು ಒಡಂಬಡಿಕೆಯನ್ನು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರಿಂದ ಅಭಿಪ್ರಾಯವನ್ನು ಪಡೆಯುವಂತೆ ಮಾನ್ಯ ಕುಲಪತಿಗಳು ಆದೇಶಿಸಿದ್ದರು, ಅದರಂತೆ ಘಟಕದ ಸಂಯೋಜಕರು ಸಲ್ಲಿಸಿರುವ ಕರಡು ಒಡಂಬಡಿಕೆಯನ್ನು ಕಾನೂನು ಸಲಹೆಗಾರರ ಅಭಿಪ್ರಾಯಕ್ಕೆ ಸಲ್ಲಿಸಿದ್ದು, ಕಾನೂನು ಸಲಹೆಗಾರರು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.<br>1. The Agreement can be entered by and between the other party (ALMT Legal).<br>2. The Agreement needs minor correction and the same has been made in draft, which can be perused and executed.<br>ಕಾನೂನು ಸಲಹೆಗಾರರ ಮೇಲಿನ ಅಭಿಪ್ರಾಯದಂತೆ ಬೌದ್ಧಿಕ ಆಸ್ತಿ ಹಕ್ಕುಗಳ ಘಟಕದಲ್ಲಿ ನಡೆಯಲಿರುವ Patent filing, copyrights and literary works ಅನ್ನು M/s. ALMT Legal, Advocates and Solicitors, Bangalore ಇವರೊಂದಿಗೆ ಮಾಡಿಕೊಂಡಿರುವ ಕರಡು ಒಡಂಬಡಿಕೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/11.27** | ಪಿಹೆಚ್.ಡಿ. ನಿಯಮಾವಳಿ 2017ರ ತಿದ್ದುಪಡಿಯನ್ನು ಮಾಡಿರುವ ಬಗ್ಗೆ. |
| | 1. ಮಾನ್ಯ ಸದಸ್ಯರಾದ ಪ್ರೊ. ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಎಂ.ಫಿಲ್ ತೇರ್ಗಡೆಯಾದ ವಿದ್ಯಾರ್ಥಿಗಳು ಸಂಬಂಧಪಟ್ಟ ವಿಷಯಕ್ಕೆ **ಸಂಶೋಧನೆ ನಡೆಸಲು** ಯು.ಜಿ.ಸಿ. ನಿಯಮಾನುಸಾರ ಎಂ.ಫಿಲ್ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕೆಂದರು.<br>2. ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜಗೌಡ, ಇವರು ಮಾತನಾಡಿ, ಮೊದಲು ಎಂ.ಫಿಲ್ ಕೋರ್ಸ್ ಮಾಡಲು ಅರ್ಹತಾ ಪ್ರವೇಶ ಪರೀಕ್ಷೆಯೇ ಇರುತ್ತಿರಲಿಲ್ಲ. ನೇರವಾಗಿ ಎಂ.ಫಿಲ್ ಕೋರ್ಸ್‌ಗೆ ಪ್ರವೇಶ ಪಡೆಯುತ್ತಿದ್ದರು. ಎಂಫಿಲ್ ತೇರ್ಗಡೆಯಾದ |

| | |
|---|---|
| | ವಿದ್ಯಾರ್ಥಿಗಳು ನೇರವಾಗಿ ಯಾವುದೇ ಅರ್ಹತಾ ಪರೀಕ್ಷೆ ಇಲ್ಲದೇ ಸಂಶೋಧನಾ ಕಾರ್ಯಕ್ಕೆ ನೋಂದಣಿಯಾಗುತ್ತಿದ್ದ ಬಗ್ಗೆ ಸಭೆಯ ಗಮನಕ್ಕೆ ತಂದರು.<br>ದಿನಾಂಕ 07-03-2020 ರಂದು ಪಿಹೆಚ್.ಡಿ. ನಿಯಮಾವಳಿ ಸಮಿತಿ ಸಭೆಯು ಪಿ.ಹೆಚ್.ಡಿ.ನಿಯಮಾವಳಿ 2017ರ ತಿದ್ದುಪಡಿಯನ್ನು ಮಾಡಿರುವ ಅಂಶಗಳನ್ನು ಪರಿಶೀಲಿಸಿ, ಸದರಿ ಅಂಶಗಳಲ್ಲಿ ಕೆಲವು ನ್ಯೂನತೆಗಳು ಇರುವುದರಿಂದ ಸದರಿ ವಿಷಯವನ್ನು ಕೈಬಿಡಲು ಸಿಂಡಿಕೇಟ್ ಅಭಿಪ್ರಾಯಿಸಿತು. |
| **ತೀರ್ಮಾನ** | **ಸದರಿ ವಿಷಯವನ್ನು ಮುಂದೂಡಲಾಯಿತು.** |
| **2020/11.28.** | ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸಹಾಯಕ ಪ್ರಾಧ್ಯಾಪಕರಿಗೂ ಸಂಶೋಧನಾ ಮಾರ್ಗದರ್ಶಕರಾಗಲು ಅವಕಾಶ ನೀಡುವಂತೆ ಕೋರಿರುವ ಬಗ್ಗೆ. |
| | ಡಾ.ಈ.ಸಿ.ನಿಂಗರಾಜ್ ಗೌಡ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಮನವಿ ಪತ್ರದಲ್ಲಿ ಸ್ವಯಂ ಆರ್ಥಿಕ ವ್ಯವಸ್ಥೆಯಡಿ ನಡೆಯುತ್ತಿರುವ School of Planning and Architecture (SPA), DOS in Molecular Biology, DOS in Genetics and Genomics, DOS in Organic Chemistry, University School of Law ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಎಲ್ಲಾ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರಿಗೆ ಸಂಶೋಧನಾ ಮಾರ್ಗದರ್ಶಕರಾಗಲು ಅವಕಾಶ ನೀಡಬೇಕೆಂದು ಹಾಗೂ ಸಂಯೋಜನೆ ಹೊಂದಿರುವ ಎಲ್ಲಾ ಸ್ನಾತಕೋತ್ತರ ಸರ್ಕಾರಿ ಪದವಿ ಕಾಲೇಜುಗಳ ಪ್ರಾಧ್ಯಾಪಕರಿಗೂ ಮಾರ್ಗದರ್ಶಕರಾಗಲು ಅವಕಾಶ ನೀಡಬೇಕೆಂದು ಕೋರಿರುವುದನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿತು. |
| **ತೀರ್ಮಾನ** | ಡಾ. ಈ.ಸಿ.ನಿಂಗರಾಜ್ ಗೌಡ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮನವಿ ಮೇರೆಗೆ, ಸ್ವಯಂ ಆರ್ಥಿಕ ವ್ಯವಸ್ಥೆಯಡಿ ನಡೆಯುತ್ತಿರುವ ಎಲ್ಲಾ ವಿಭಾಗಗಳಲ್ಲಿನ ಎಲ್ಲಾ ಸಹಾಯಕ ಪ್ರಾಧ್ಯಾಪಕರಿಗೂ ಸಂಶೋಧನಾ ಮಾರ್ಗದರ್ಶಕರಾಗಲು ಅವಕಾಶ ನೀಡುವ ಬಗ್ಗೆ ಒಂದು ಸಮಿತಿ ರಚಿಸಿ, ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ನೇಮಕ ಮಾಡುವ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/11.29.** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ "ದೃಷ್ಟಿ ವಿಶ್ವಾಸಿಗರ ಸಮನ್ವಯ ಸಬಲೀಕರಣ ಕೇಂದ್ರ"ವನ್ನು ಸ್ಥಾಪಿಸುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ "ದೃಷ್ಟಿ ವಿಶ್ವಾಸಿಗಳ ಸಮನ್ವಯ ಸಬಲೀಕರಣ ಕೇಂದ್ರ"ವನ್ನು ಸ್ಥಾಪಿಸುವ ಸಂಬಂಧ, ಆರ್ಥಿಕ ಸಹಾಯಾನುದಾನವನ್ನು ಕೋರಿ ಸಿದ್ಧಪಡಿಸಿರವ ಪ್ರಸ್ತಾವನೆಗೆ ಯಾವುದೇ ಪರಿನಿಯಮಗಳಿರುವುದಿಲ್ಲವೆಂಬುದನ್ನು ಮನಗಂಡು ಸರ್ಕಾರದ ಆದೇಶನಾನುಸಾರ, ಕರಡು ಅಧಿನಿಯಮವನ್ನು ನಿಯಮಾನುಸಾರ ಸಿದ್ಧಪಡಿಸಿರುವುದನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಅನುಮೋದಿಸಿತು |
| **2020/11.30** | ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಸಂಬಂಧ ಅಧಿನಿಯಮವನ್ನು ಪರಿಷ್ಕರಿಸುವ ಬಗ್ಗೆ. |
| **ತೀರ್ಮಾನ** | ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಅಧಿನಿಯಮವನ್ನು ಪರಿಷ್ಕರಿಸುವ ಸಂಬಂಧ, ವಿಶ್ವವಿದ್ಯಾನಿಲಯದ ಕರಡು |

| | |
|---|---|
| | ಅಧಿನಿಯಮ ರಚನಾ ಸಮಿತಿ ಸಭೆಯ ಶಿಫಾರಸ್ಸಿನನ್ವಯ ಹಾಗೂ ರಾಜ್ಯ ಸರ್ಕಾರದ ಆದೇಶಗಳನ್ವಯ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(1)ರನ್ವಯ, ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಅಧಿನಿಯಮವನ್ನು ಪರಿಷ್ಕರಿಸಿದ್ದು, ಸದರಿ ಪರಿಷ್ಕೃತ ಕರಡು ಅಧಿನಿಯಮವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.<br><br>ವಿಶ್ವವಿದ್ಯಾನಿಲಯದ ಕರಡು ಅಧಿನಿಯಮ ರಚನಾ ಸಮಿತಿ ಸಭೆಯ ಅಧಿನಿಯಮದ ನಡಾವಳಿಯಲ್ಲಿ ಈ ಕೆಳಕಂಡ ವಿಷಯಗಳಿಗೆ ಅಧಿನಿಯಮದ ಬಗ್ಗೆ ಚರ್ಚಿಸಿ, ನಿರ್ಣಯ ತೆಗೆದುಕೊಳ್ಳಲು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸಲು ತೀರ್ಮಾನಿಸಿತು.<br><br>1. Department of Disability & Rehabilitation Studies<br>2. M.Tech in Material Science.<br>3. ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲು ಅಧಿನಿಯಮ ರಚಿಸುವ ಬಗ್ಗೆ.<br>4. ದೃಷ್ಟಿ ವಿಶ್ವಾಸಿಗಳ ಸಮನ್ವಯ ಸಬಲೀಕರಣ ಕೇಂದ್ರ ಸ್ಥಾಪನೆಗೆ ಅಧಿನಿಯಮ ರಚಿಸುವ ಬಗ್ಗೆ. |
| **2020/11.31** | ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳ ವೇತನ ಹೆಚ್ಚಳ ಮಾಡುವ ಬಗ್ಗೆ. |
| | ಡಾ. ಎಂ.ಎಸ್.ದಾಮೋದರ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಮನವಿ ಪತ್ರದಲ್ಲಿ ವಿವಿಧ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಉದ್ಯೋಗಿಗಳಿಗೆ 2014ರಲ್ಲಿ ಹತ್ತು ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿದ್ದವರಿಗೆ ಗ್ರೇಡ್ ವೇತನವನ್ನು ನಿಗದಿ ಪಡಿಸಿ, ಆದೇಶ ಹೊರಡಿಸಿ ತದ ನಂತರ ಸದರಿ ಆದೇಶವನ್ನು ಹಿಂಪಡೆದಿರುವ ಬಗ್ಗೆ ತಿಳಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಸಭೆಯು ಚರ್ಚಿಸಿತು.<br><br>1. ಮೈಸೂರು ವಿಶ್ವವಿದ್ಯಾನಿಲಯದ ಬೋಧಕೇತರ ವೃಂದದಲ್ಲಿ ದ್ವಿತೀಯ ದರ್ಜೆ ಸಹಾಯಕ, ಬೆರಳಚ್ಚುಗಾರರು ಹಾಗೂ ಸಹಾಯಕ, ತೋಟಗಾರರು, ಸೇವಕ, ಪರಿಚಾರಕ ಹಾಗೂ ಇನ್ನು ಹಲವು ವಿಭಾಗಗಳಲ್ಲಿ ತಾಂತ್ರಿಕ ಹುದ್ದೆಗಳಲ್ಲಿ 10 ವರ್ಷ ಮೇಲ್ಪಟ್ಟು ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿದ್ದ ಉದ್ಯೋಗಿಗಳಿಗೆ ರೂ.10/- ಕಡಿಮೆ ಮಾಡಿ ನಿಯಮಾನುಸಾರ ಅದಕ್ಕೆ ಅನ್ವಯಿಸುವ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಒಳಗೊಂಡಂತೆ ವೇತನವನ್ನು ನಿಗದಿಪಡಿಸಿ, ಖಾಯಂ ನೌಕರರುಗಳಿಗೆ ನೀಡುತ್ತಿದ್ದಂತೆ ವೇತನವನ್ನು ಪಾವತಿ ಮಾಡಲಾಗುತ್ತಿದೆ.<br>2. ಈ ಸಂಬಂಧವಾಗಿ ಸರ್ಕಾರಿ ಲೆಕ್ಕ ಪರಿಶೋಧಕರು ತಾತ್ಕಾಲಿಕ ನೌಕರರುಗಳಿಗೆ ನಿಯಮಬಾಹಿರವಾಗಿ ವೇತನ ಪಾವತಿಸಿರುತ್ತಿರುವುದಾಗಿ ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಗ್ರೇಡೆಡ್ ವೇತನವನ್ನು ವಿಸ್ತರಿಸಿದ ಆದೇಶವನ್ನು ಹಿಂಪಡೆದು, ಅವರುಗಳು ಪಡೆಯುತ್ತಿದ್ದ ವೇತನವನ್ನೇ ಸಂಚಿತ ವೇತನವನ್ನಾಗಿ ಮಾರ್ಪಡಿಸಿ, ಪಾವತಿಸಲಾಗುತ್ತಿದೆ.<br>3. ಡಾ. ಈ.ಸಿ.ನಿಂಗರಾಜಗೌಡರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ತಾಂತ್ರಿಕ ಸಿಬ್ಬಂದಿವರ್ಗದವರಿಗೂ ಕೂಡಾ ವೇತನವನ್ನು ಹೆಚ್ಚಳ ಮಾಡುವಂತೆ ಸಭೆಯನ್ನು ಕೋರಿದರು. |

| | |
|---|---|
| ತೀರ್ಮಾನ | 1. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರುಗಳಿಗೆ ಹೆಚ್ಚಿನ ವೇತನ ಪಾವತಿಸುತ್ತಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗಿದ್ದು, ಸುಮಾರು 500ಕ್ಕೂ ಹೆಚ್ಚು ತಾತ್ಕಾಲಿಕ ನೌಕರರುಗಳು ಹತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ್ದು, ಇವರುಗಳಿಗೆ ವೇತನವನ್ನು ಹೆಚ್ಚಿಸುವ ಸಂಬಂಧ, ಹಣದ ಲಭ್ಯತೆಯನ್ನು ಹಣಕಾಸು ಅಧಿಕಾರಿಗಳಿಂದ ಖಚಿತಪಡಿಸಿಕೊಂಡು ಸೂಕ್ತ ಕ್ರಮ ವಹಿಸುವುದು.<br>2. ವಿಶ್ವವಿದ್ಯಾನಿಲಯದ ತಾತ್ಕಾಲಿಕ ನೌಕರರಿಗೆ ಹೆಚ್ಚಿನ ವೇತನವನ್ನು ನಿಗದಿ ಮಾಡುವ ಬಗ್ಗೆ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಒಂದು ಸಮಿತಿ ರಚಿಸಿ ತೀರ್ಮಾನವನ್ನು ಕೈಗೊಳ್ಳುವುದು.<br>3. ವಿಶ್ವವಿದ್ಯಾನಿಲಯದ ತಾತ್ಕಾಲಿಕ ನೌಕರರಿಗೆ ಸಂಚಿತ ವೇತನವನ್ನು (ಗ್ರೇಡೆಡ್ ವೇತನವನ್ನು) ಬಿಡುಗಡೆ ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆಯುವುದು.<br>4. ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ನೌಕರರುಗಳಿಗೆ ಒಂದು ಬ್ಯಾಚ್‌ನಲ್ಲಿ 50 ಮಂದಿಯಂತೆ ಒಟ್ಟು ನಾಲ್ಕು ಬ್ಯಾಚ್ ಮಾಡಿ, ಅವರುಗಳಿಗೆ ವಿಶ್ವವಿದ್ಯಾನಿಲಯದ ಆಡಳಿತ ವ್ಯವಹಾರಕ್ಕೆ ಸಂಬಂಧಪಟ್ಟಂತೆ ತರಬೇತಿಯನ್ನು ನೀಡುವುದು.<br>5. ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆ ಇದ್ದರೂ ಮಾನವೀಯತೆ ದೃಷ್ಟಿಯಿಂದ ಕನಿಷ್ಠ ಹೆಚ್ಚುವರಿ ವೇತನವನ್ನು ನಿಗದಿ ಮಾಡಲು ಸಭೆಯು ನಿರ್ಣಯಿಸಿತು. |
| **2020/11.32** | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಚಾಮರಾಜನಗರ ಸ್ನಾತಕೋತ್ತರ ವಿಭಾಗದಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ಉಂಟಾಗಿರುವ ಗೊಂದಲಗಳ ಸಂಬಂಧ ಚರ್ಚಿಸುವಂತೆ ಕೋರಿರುವುದರ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಚಾಮರಾಜನಗರದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಆವರಣದಲ್ಲಿ ಅಭಿವೃದ್ಧಿ ಕಾಮಗಾರಿ Construction of approach road and entrance arch to Dr.B.R.Ambedkar P.G.Centre at Chamarajanagar ಟೆಂಡರ್ ನಿಯಮಾನುಸಾರ ಗುತ್ತಿಗೆದಾರರಾದ ಶ್ರೀ ರಾಜೇ ಅರಸ್ ಅಮರ್‌ನಾಥ್. ಮೆ: ರಾಜೇಅರಸ್ ಬಿಲ್ಡರ್ಸ್, ಮೈಸೂರು ಇವರಿಗೆ ವಹಿಸಿ ನಿರ್ವಹಿಸಲಾಗುತ್ತಿರುವ ವಿಷಯದ ಬಗ್ಗೆ ಸಭೆಯು ಕೂಲಂಕುಷವಾಗಿ ಈ ಕೆಳಕಂಡಂತೆ ಚರ್ಚಿಸಿ, ನಿರ್ಣಯವನ್ನು ಕೈಗೊಳ್ಳಲಾಯಿತು.<br><br>ಪ್ರದೀಪ್ ದೀಕ್ಷಿತ್ ಮಾತನಾಡಿ ಯಾವ S.R. Follow ಮಾಡಿರುವುದು ಕೇಂದ್ರದ್ದೋ ಅಥವಾ ರಾಜ್ಯದ್ದೋ ನಿಗಧಿಯಾಗಿರುವ ದರ ಇದರ ಸಂಪೂರ್ಣ ಮಾಹಿತಿ ನೀಡುವಂತೆ ಕೇಳಿದರು.<br>1. ಸದರಿ ಕಾಮಗಾರಿಯ ಬಗ್ಗೆ ಭೂ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ, ಕಾಮಗಾರಿಯನ್ನು ಕೈಗೊಳ್ಳಲಾಗಿರುವುದು.<br>2. ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಎಸ್.ಆರ್.ಪ್ರಕಾರ ದರ ನಿಗದಿ ಮಾಡದೆ ಹೆಚ್ಚುವರಿಯಾಗಿ ದರವನ್ನು ನಿಗದಿಪಡಿಸಿರುವುದು.<br>3. ಕಾಮಗಾರಿಗೆ ಸಂಬಂದಪಟ್ಟ ಹುಂಡಿಗಳನ್ನು ತಡೆಹಿಡಿಯುವುದು.<br>4. ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು. |

| | |
|---|---|
| | 5. ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟಂತಹ ಸ್ಥಿರಾ ಮತ್ತು ಚರಾ ಆಸ್ತಿಗೆ ಸಂಬಂಧಪಟ್ಟಂತೆ Property card ಅಳವಡಿಸುವುದು.<br>6. ವಿಶ್ವವಿದ್ಯಾನಿಲಯದಿಂದ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಸದರಿ ಕಾಮಗಾರಿಗಳ ಬಗ್ಗೆ ಸಿಂಡಿಕೇಟ್ ಸಭೆಯ ಗಮನಕ್ಕೆ ತರುವುದು. |
| ತೀರ್ಮಾನ | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಚಾಮರಾಜನಗರ ಸ್ನಾತಕೋತ್ತರ ವಿಭಾಗದಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ಉಂಟಾಗಿರುವ ಗೊಂದಲಗಳ ಬಗ್ಗೆ ಚರ್ಚಿಸುವಂತೆ ಕೋರಿರುವ ಸಂಬಂಧ, ಸದರಿ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ, ಕ್ರಮ ಕೈಗೊಳ್ಳಲು ತೀರ್ಮಾನಿಸಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲು ಸದರಿ ವಿಷಯವನ್ನು ಮುಂದೂಡಲಾಯಿತು. |
| **2020/11.33** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಸಂಗೀತ ಪೀಠ" ಸ್ಥಾಪನೆ ಕುರಿತು. |
| ತೀರ್ಮಾನ | ಭಾರತೀಯ ಚಲನಚಿತ್ರ ಸಂಗೀತ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಹಿನ್ನೆಲೆ ಗಾಯಕ, ಅಪ್ರತಿಮ ಕಲಾವಿದ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂರವರ ಸಾಧನೆಯನ್ನು ವಿವಿಧ ರೂಪಗಳಲ್ಲಿ ದಾಖಲಿಸಿ, ಮುಂದಿನ ತಲೆಮಾರಿಗೆ ತಲುಪಿಸಲು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀಯುತರ ಹೆಸರಿನಲ್ಲಿ "ಡಾ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಸಂಗೀತ ಅಧ್ಯಯನ ಪೀಠ"ವನ್ನು ಸ್ಥಾಪಿಸಿ, ಪಿ.ಬಿ. ಶ್ರೀನಿವಾಸರನ್ನೂ ಸೇರಿದಂತೆ ಪೀಠ ಸ್ಥಾಪಿಸಿ ಎಂದು ಕೋರಿದರು. ಸಂಗೀತ ಕ್ಷೇತ್ರದ ಸರ್ವತೋಮುಖ ಬೆಳವಣಿಗೆಯನ್ನು ಪ್ರಧಾನ ಉದ್ದೇಶವನ್ನಾಗಿ ಇರಿಸಿಕೊಂಡು, ಸಂಗೀತದ ಎಲ್ಲಾ ಪ್ರಕಾರಗಳ ಬಹುಮುಖಿ ಬೆಳವಣಿಗೆಗಾಗಿ ಪೀಠವನ್ನು ಭೂಮಿಕೆಯಾಗಿ ಅಳವಡಿಸಿಕೊಂಡು ಇದರ ಕಾರ್ಯವ್ಯಾಪ್ತಿಯನ್ನು ಶಾಸ್ತ್ರೀಯ ಹಾಗೂ ಲಘು ಶಾಸ್ತ್ರೀಯ ಕ್ಷೇತ್ರದ ವ್ಯಾಪ್ತಿಗೆ ಒಳಪಡಿಸುವ ಪೀಠದ ಸ್ಥಾಪನೆಗೆ ಅಂದಾಜು ರೂ. 5,00,000/- ಗಳನ್ನು ವಾರ್ಷಿಕವಾಗಿ ಮೀಸಲಿರಿಸಿ, ಸದರಿ ಮೊತ್ತದಲ್ಲಿ ವಿಶೇಷ ಉಪನ್ಯಾಸ, ಕಾರ್ಯಗಾರ, ಪ್ರಾತ್ಯಕ್ಷಿಕೆ, ವಿಚಾರ ಸಂಕಿರಣ, ಗ್ರಂಥ ಪ್ರಕಟಣೆ ಮುಂತಾದ ಶೈಕ್ಷಣಿಕ ಕಾರ್ಯಗಳನ್ನು ಆಯೋಜಿಸುವುದು. ಇವೆಲ್ಲವನ್ನು ನಿರ್ವಹಿಸಲು ಕ್ಷೇತ್ರತಜ್ಞರೊಬ್ಬರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ (ವಾರ್ಷಿಕ) ಸೂಕ್ತ ಗೌರವ ಸಂಭಾವನೆದೊಂದಿಗೆ ನೇಮಿಸಿಕೊಳ್ಳುವ ಬಗ್ಗೆ ಅಧಿನಿಯಮವನ್ನು ರಚಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/11.34** | ಸಿಎಎಸ್ ಅಡಿಯಲ್ಲಿ ಪದೋನ್ನತಿ ಹೊಂದಿರುವ ಅಧ್ಯಾಪಕರುಗಳಿಗೆ ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ನೀಡುವ ಬಗ್ಗೆ. |
| ತೀರ್ಮಾನ | ಡಾ. ಚೈತ್ರಾ ನಾರಾಯಣ್, ಮಾನ್ಯ ಸಿಂಡಿಕೇಟ್ ಸದಸ್ಯರು, ಇವರು ಯುಜಿಸಿ ಸಿಎಎಸ್ ಅಡಿಯಲ್ಲಿ ಪದೋನ್ನತಿ ಹೊಂದಿದ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಅರ್ಹತಾ ದಿನಾಂಕದಿಂದ ಆರ್ಥಿಕ ಸೌಲಭ್ಯಗಳನ್ನು ನೀಡುವ ಕುರಿತು ಕೋರಿರುವ ವಿಷಯವನ್ನು ಸಭೆಯು ಕೂಲಂಕಷವಾಗಿ ಚರ್ಚಿಸಿ, ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಂಡಿತು.<br>1. ಪದೋನ್ನತಿ ನೀಡಿರುವ ಅಧ್ಯಾಪಕರುಗಳಿಗೆ ಅರ್ಹತಾ ದಿನಾಂಕದಿಂದ ಆರ್ಥಿಕ ವೇತನವನ್ನು ನೀಡುವ ಬದಲು ಸಿಂಡಿಕೇಟ್ ಸಭೆಯ ದಿನಾಂಕದಿಂದ ನೀಡುವಂತೆ ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ರದ್ದುಮಾಡಿ(revoke) ಅರ್ಹತಾ ದಿನಾಂಕದಿಂದಲೇ ಆರ್ಥಿಕ ಸೌಲಭ್ಯಗಳನ್ನು ನೀಡಲು ತೀರ್ಮಾನಿಸಲಾಯಿತು. |

| | |
|---|---|
| | ಮುಂದುವರೆಯುತ್ತಾ, ಸದರಿ ತೀರ್ಮಾನವು ಘನಸರ್ಕಾರದಿಂದ ಅನುಮೋದನೆಯೊಂದಿಗೆ ಅನುದಾನ ಬಿಡುಗಡೆಯಾದ ನಂತರ ಅನುಷ್ಠಾನಗೊಳಿಸಲು ತೀರ್ಮಾನಿಸಿತು. |
| **2020/11.35** | ಡಾ. ಪಿ.ಆರ್. ತಿಪ್ಪೇಸ್ವಾಮಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಡಾ. ಪಿ.ಆರ್.ತಿಪ್ಪೇಸ್ವಾಮಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತಿದ್ದ ಡಾ. ಪಿ.ಕೆ.ರಾಜಶೇಖರ, ಇವರ ನೇಮಕಾತಿ ಅವಧಿಯು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸದರಿ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವುದನ್ನು ಅಧ್ಯಕ್ಷರ ವಿವೇಚಾನಾಧಿಕಾರಕ್ಕೆ ಬಿಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2020/11.36** | ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಹೆಚ್.ಬಿ.ಮಲ್ಲಿಕಾರ್ಜುನ ಸ್ವಾಮಿ ಇವರ ನೇಮಕಾತಿ ಅವಧಿಯು ಪೂರ್ಣಗೊಂಡಿರುವುದರಿಂದ, ಸದರಿ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವುದನ್ನು ಅಧ್ಯಕ್ಷರ ವಿವೇಚಾನಾಧಿಕಾರಕ್ಕೆ ಬಿಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2020/11.37** | Promotion By Selection to the Posts of the Deputy Registrars |
| **Decision** | The recommendations of the Selection Committee for the promotion to the post of Deputy Registrar of Sri Manjunatha K.N. who is working as Assistant Registrar is accepted from the date of the Syndicate decision. |
| **2020/11.38** | Promotions to University Teachers Under UGC CAS |
| **Decision** | The recommendations of the Selection Committee and Screening cum Evaluation Committee of various subjects for promotion of teachers in various disciplines to the higher AGP furnished at Annexure-A are approved. Further, the syndicate has also decided to extend the monetary benefits to the teachers from the date of the Syndicate dicision **i.e.** 25-11-2020. |
| **2020/11.39** | ದಿವಂಗತ ಪ್ರೊ. ಸುಭಾಷ್ ಎನ್. ಸಿದ್ದಣ್ಣನವರ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರ ಪತ್ನಿಯಾದ ಶ್ರೀಮತಿ ಎಸ್.ಎಸ್.ರೇಖಾ ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ದಿವಂಗತ ಪ್ರೊ. ಸುಭಾಷ್ ಎನ್. ಸಿದ್ದಣ್ಣನವರ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರ ಪತ್ನಿಯಾದ ಶ್ರೀಮತಿ ರೇಖಾ ಎಸ್.ಎಸ್.ರವರು ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವಂತೆ ಮನವಿಯನ್ನು ನಿಗಧಿತ ಅರ್ಜಿ ನಮೂನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಸಲ್ಲಿಸಿದ್ದಲ್ಲಿ, ಅದಕ್ಕನುಗುಣವಾಗಿ ಅರ್ಹತೆಯನ್ನು ಪರಿಗಣಿಸಿ, ಅನ್ವಯವಾಗುವ ಹುದ್ದೆಯಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧದ ವಿಷಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು.**

1. ಮಾನ್ಯ ಸದಸ್ಯರಾದ ಡಾ.ಈ.ಸಿ.ನಿಂಗರಾಜ್‌ಗೌಡ ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ಕೆಲವರು ಅನಧಿಕೃತವಾಗಿ ಭಿತ್ತಿಪತ್ರಗಳನ್ನು ಕಟ್ಟಡಗಳ ಗೋಡೆಗಳಿಗೆ ಹಾಕುತ್ತಿರುವುದು ಗಮನಕ್ಕೆ ಬಂದಿದ್ದು, ಕೂಡಲೇ ಅವರನ್ನು ಭದ್ರತಾ ಸಿಬ್ಬಂದಿಗಳಿಂದ ನಿಯಂತ್ರಿಸುವಂತೆ ಸಭೆಯನ್ನು ಕೋರಿದರು.

   ನಂತರ ಸಭೆಯು ಮಾನ್ಯ ಸದಸ್ಯರ ಕೋರಿಕೆಯನ್ನು ಅನುಮೋದಿಸಿತು.

2. ಮಾನ್ಯ ಸದಸ್ಯರಾದ ಪ್ರೊ.ಎಸ್.ಡಿ.ದೊಡ್ಡಚಾರಿಯವರ ಮನವಿಯಲ್ಲಿನ ಡಾ.ಬಿ.ಜಿ.ಎಲ್.ಸ್ವಾಮಿಗೆ ಸಂಬಂಧಪಟ್ಟಂತೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ಸಭೆಯು ತೀರ್ಮಾನಿಸಿತು.
3. ಮಾನ್ಯ ಸದಸ್ಯರಾದ ಶ್ರೀ.ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ ರವರು ಮಾತನಾಡುತ್ತಾ, ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗಳಾದ ಬಿ.ಕಾಂ ಮತ್ತು ಬಿ.ಬಿ.ಎ ವಿಷಯಗಳಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಕಡಮೆ ಅಂಕಗಳು ಬಂದಿದ್ದು, ಮರು ಮೌಲ್ಯಮಾಪನ ಮಾಡಿದಾಗ ಹೆಚ್ಚು ಅಂತರದಿಂದ ಅಂಕಗಳು ಬಂದಿರುವ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ದೂರು ಮನವಿಗಳು ಬಂದಿರುವುದರನ್ನು ಸಭೆಯ ಗಮನಕ್ಕೆ ತಂದರು.

   ಮುಂದುವರೆದು ಮೊದಲ ಬಾರಿ ಮೌಲ್ಯಮಾಪನ ಮಾಡಿದವರಿಗೆ ಶಿಕ್ಷೆಯನ್ನು ನೀಡುವುದು ಹಾಗೂ ವಿದ್ಯಾರ್ಥಿಗಳಿಗೆ ಶುಲ್ಕದ ಮೊತ್ತವನ್ನು ಮರುಭರಿಕೆ ಮಾಡಿ ಕೊಡುವ ಬಗ್ಗೆ ತಮ್ಮ ಅಭಿಪ್ರಾಯವನ್ನು ಸಭೆಗೆ ವ್ಯಕ್ತಪಡಿಸಿದರು.

   ನಂತರ ಸಭೆಯು ಮಾನ್ಯ ಸದಸ್ಯರ ಅಭಿಪ್ರಾಯವನ್ನು ಅನುಮೋದಿಸುತ್ತಾ, ಮೌಲ್ಯಮಾಪನವನ್ನು ತಾತ್ಕಾಲಿಕ ಅತಿಥಿ ಉಪನ್ಯಾಸಕರಿಂದ ನಿರ್ವಹಿಸುತ್ತಿರುವುದರಿಂದ ಈ ರೀತಿ ತಪ್ಪುಗಳು ಆಗುತ್ತಿರುವುದು ಕಂಡು ಬಂದಿದ್ದು, ಮುಂದಿನ ದಿನಗಳಲ್ಲಿ ಖಾಯಂ ನೌಕರರಿಂದ ಮೌಲ್ಯ ಮಾಪನ ಮಾಡುವ ವ್ಯವಸ್ಥೆ ಮಾಡುವುದರ ಬಗ್ಗೆ ನಿರ್ಣಯವನ್ನು ಕೈಗೊಂಡಿತು.

4. ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್‌ಗೌಡ ರವರು ಮಾತನಾಡಿ, block list ನಲ್ಲಿ ಇರುವ ಅಧ್ಯಾಪಕರಿಂದ ಮೌಲ್ಯಮಾಪನ ಮಾಡಿಸಬಾರದೆಂದು ಸಭೆಗೆ ತಿಳಿಸಿದರು.
5. ಶ್ರೀ ದಿನೇಶ್.ಎಂ.ಗಾವಂಕರ್‌ರವರು ಮಾತನಾಡಿ, ಸ್ನಾತಕೋತ್ತರ ಅಂತಿಮ ಪದವಿ ಪರೀಕ್ಷೆಗಳಿಗೆ Challenging Valuation ಮಾಡುವ ಹಾಗೆ ಪದವಿ ಪರೀಕ್ಷೆಯ ಅಂತಿಮ ವರ್ಷದ ಪರೀಕ್ಷೆಗಳಿಗೂ ಸಹ Challenging Valuation ಮಾಡಿಸಬೇಕೆಂದು ಸಭೆಯನ್ನು ಆಗ್ರಹಿಸಿದರು. ಇದಕ್ಕೆ ಪ್ರದೀಪ್ ದೀಕ್ಷಿತ್ ಧ್ವನಿಗೂಡಿಸಿ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಮಾಡಬೇಕೆಂದು ಒತ್ತಾಯಿಸಿದರು.

   ನಂತರ ಸಭೆಯು ಮಾನ್ಯ ಸದಸ್ಯರ ಕೋರಿಕೆಯನ್ನು ಅನುಮೋದಿಸುತ್ತಾ, ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಸ್ನಾತಕೋತ್ತರ ವಿಭಾಗಗಳಲ್ಲಿ ಒಂದು ಪ್ರತ್ಯೇಕ ಕೇಂದ್ರಸ್ಥಾಪನೆ ಮಾಡಿ, ಮುಂದಿನ ಶೈಕ್ಷಣಿಕ ವರ್ಷದ ಪದವಿ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯವನ್ನು ನಡೆಸುವ ತೀರ್ಮಾನವನ್ನು ಕೈಗೊಂಡಿತು.

6. ಶ್ರೀ. ದಿನೇಶ್ ಎಂ.ಗಾವಂಕರ್‌ರವರು ಮಾತನಾಡುತ್ತಾ, ಘಟಿಕೋತ್ಸವ ಕಾರ್ಯಕ್ರಮದಲ್ಲಿ ವೇದಿಕೆ ಮೇಲೇರಲು ವಿಶೇಷ ಚೇತನ ವಿದ್ಯಾರ್ಥಿಗಳಿಗೆ ತಾತ್ಕಾಲಿಕವಾಗಿ ರ್‍ಯಾಂಪ್ ವ್ಯವಸ್ಥೆಯನ್ನು ಅಳವಡಿಸಬೇಕೆಂದು ತಿಳಿಸಿದಾಗ ಸಭೆಯು ಮಾನ್ಯ ಸದಸ್ಯರ ಸಲಹೆಯನ್ನು ಅನುಮೋದಿಸಿತು.
7. ಮಾನ್ಯ ಸದಸ್ಯರುಗಳಾದ ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ ಹಾಗೂ ಡಾ. ಈ.ಸಿ.ನಿಂಗರಾಜಗೌಡರವರು ಮಾತನಾಡಿ, ಫೆಬ್ರವರಿ 2020 ರಿಂದ ಇಲ್ಲಿಯವರೆಗೂ ವಿಶ್ವವಿದ್ಯಾನಿಲಯದಿಂದ ರಚಿತಗೊಂಡ ಸಿಂಡಿಕೇಟ್ ಉಪಸಮಿತಿ ಪಟ್ಟಿಗಳುಳ್ಳ ಮಾಹಿತಿಯನ್ನು ನೀಡಬೇಕೆಂದರು

ಮುಂದುವರೆದು, ಚಾಮರಾಜನಗರ ಜಿಲ್ಲೆಯ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿ ಶುಲ್ಕವನ್ನು ಪಾವತಿ ಮಾಡಿರುತ್ತಾರೆ. ತಾಂತ್ರಿಕ ದೋಷದಿಂದಾಗಿ, ಅವರ ಖಾತೆಯಿಂದ 2ರಿಂದ 4 ಬಾರಿ ಹಣ ಪಾವತಿಯಾಗಿದೆ. ತಾವು ದಯಮಾಡಿ ಆ ರೀತಿ ಹಣ ಪಾವತಿಯಾಗಿದ್ದರೆ ವಿದ್ಯಾರ್ಥಿಗಳ ಖಾತೆಗೆ ಜಮಾ ಮಾಡಬೇಕೆಂದು ಸಭೆಯನ್ನು ಕೋರಿದರು.

ಸಭೆಯು ಮಾನ್ಯ ಸದಸ್ಯರ ಕೋರಿಕೆಯನ್ನು ಅನುಮೋದಿಸಿತು.

8. ಮಾನ್ಯ ಸದಸ್ಯರುಗಳಾದ ಶ್ರೀ.ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ನೌಕರರಲ್ಲಿ ಸ್ಥಳೀಯರಿಗೆ ವಸತಿಗೃಹವನ್ನು ಹಂಚಿಕೆ ಮಾಡಬಾರದು ಎಂದು ಸಮಿತಿಯಲ್ಲಿ ಶಿಫಾರಸ್ಸು ಮಾಡಿದ್ದರೂ ಸಹ ವಸತಿಗೃಹವನ್ನು ನೀಡಿರುವುದು ಕಂಡು ಬಂದಿದೆ ಹಾಗೂ ವಿಶ್ವವಿದ್ಯಾನಿಲಯದ ವಸತಿಗೃಹ ಹಂಚಿಕೆ ಸಮಿತಿಯ ನಡಾವಳಿಯಲ್ಲಿ ಎಲ್ಲಾ ಸದಸ್ಯರ ಸಹಿ ಇದ್ದರೂ ಸಹ ಕೆಲವು ಮಾರ್ಪಾಡುಗಳನ್ನು ಮಾಡಿರುವುದರ ಬಗ್ಗೆ ಸದಸ್ಯರ ಗಮನಕ್ಕೆ ಬಾರದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಹಾಜರಿದ್ದ ಎಲ್ಲಾ ಸದಸ್ಯರ ಸಹಿ ಸರಿಯಾಗಿ ಪಡೆದುಕೊಂಡಿಲ್ಲ ನಂತರ ಅನೇಕ ಮಾರ್ಪಾಡುಗಳು ನಮಗರಿವಿಲ್ಲದೆ ಆಗಿದೆ. ಇದು ಹೇಗಾಯ್ತು ಎಂದು ಪ್ರಶ್ನಿಸಿದರು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯವ ವಸತಿಗೃಹಗಳನ್ನು ನಿಯಮಾನುಸಾರ ಖಾಯಂ ಅಧ್ಯಾಪಕ/ಅಧ್ಯಾಪಕೇತರ ನೌಕರರಿಗೆ ಜೇಷ್ಠತೆ ಅನುಸಾರವಾಗಿ ಹಂಚಿಕೆ ಮಾಡಲಾಗುತ್ತಿದ್ದು, ವಸತಿಗೃಹಗಳು ತುಂಬಾ ಹಳೆಯದಾಗಿದ್ದು, ಹಂಚಿಕೆಯಾಗುವ ವಸತಿಗೃಹಗಳ ದುರಸ್ಥಿ ಕಾರ್ಯಕ್ಕಾಗಿ ಅಧಿಕ ವೆಚ್ಚವಾಗುತ್ತಿದ್ದು, ಇದರಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಹೆಚ್ಚಾಗಿದೆ. ಖಾಲಿ ಇರುವ ವಸತಿಗೃಹಗಳನ್ನು ತಾತ್ಕಾಲಿಕ ಅಧ್ಯಾಪಕ/ಅಧ್ಯಾಪಕೇತರ ನೌಕರರಿಗೆ ಹಂಚಿಕೆ ಮಾಡಲಾಗುತ್ತಿದೆ. ನಿಯಮಾನುಸಾರವಾಗಿ ತಾತ್ಕಾಲಿಕ ನೌಕರರುಗಳಿಗೆ ವಸತಿಗೃಹಗಳನ್ನು ಹಂಚಿಕೆ ಮಾಡಬಾರದು. ಆದರೆ, ಒತ್ತಡಗಳಿಂದಾಗಿ ಹಂಚಿಕೆ ಮಾಡಲಾಗುತ್ತಿದ್ದು, ವಸತಿಗೃಹಗಳ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಸಾಧ್ಯವಿಲ್ಲ. ಹಂತ ಹಂತವಾಗಿ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನ ಮಾಡಲಾಗುವುದು ಎಂದು ಸಭೆಗೆ ವಿವರಿಸಿದರು.

ನಂತರ ಸಭೆಯು ಮಾನ್ಯ ಕುಲಪತಿಯವರ ತೀರ್ಮಾನವನ್ನು ಅನುಮೋದಿಸಿತು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ | ಕುಲಪತಿ ಮತ್ತು ಅಧ್ಯಕ್ಷರು